ಸಂಪುಟ : 8 ಸಂಚಿಕೆ : 185 ಪುಟ : 4 ಬೆಲೆ : 3.00 ಶನಿವಾರ ಆಗಸ್ಟ್ 26, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 185 Pages : 4 Price : 3.00 Saturday August 26, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಶನಿವಾರ ನೀರು ಪೂರೈಕೆಯಾಗುವ ಸ್ಥಳಗಳ ಮಾಹಿತಿ ಹೀಗಿದೆ.



ವಾರ್ಡ್ ನಂ 11, 12ರ ಕರಿಯಮ್ಮಕಲ್ಲು ಇರಾಣಿ ಕಾಲನಿಯ ನಿಸರ್ಗ ಬಡಾವಣೆ, ವಾರ್ಡ್ ನಂ.29ರ ಪರಸುರವರ ಲೈನ್, ಬನ್ನಿಕಟ್ಟಿ ಲೈನ್, ಪಾಸ್ತೆ ಲೈನ್, ಚಂದಾವರಿ ಲೈನ್, ನೆಲಮಂಡಲ ಸ್ಕೂಲ್ ಲೈನ್, ರಂಗಪ್ಪಜ್ಜನಮಠ 1ನೇ ಬ್ಯಾಚ್, ವಾರ್ಡ್ ನಂ.3ರ ಜಮಾದಾರ ನಗರ, ವಾರ್ಡ್ ನಂ. 30, 27 ರೋಣದರ ಲೈನ್, ಪುಟ್ಟರಾಜ ನಗರ, ಸಂಕಣ್ಣವರ ಲೈನ್, ಕೇಶವನಗರ, ಎಸ್‌ಬಿ ಆಫೀಸ್, ಪೊಲೀಸ್ ಕ್ವಾಟ್ರಸ್, ಡೋಣಿ, ವಾರ್ಡ್ ನಂ.28ರ ಸೊಲಾಪಟಿ ಲೈನ್, ಕೃಷ್ಣಾ ಟ್ಯೂಷನ್ ಲೈನ್, ಗವಾಯಿಗಳ ಲೈನ್, ಆಶ್ರಮ ಮುಂದಿನ ಭಾಗ, ವಾರ್ಡ್ ನಂ. 17, 18, 25ರ ಖಾನತೋಟ ಭಾಗ-2, ಕೋಟಿಯವರ ಲೈನ್, ಮುನಸಿ ಪ್ರೆಸ್, ಕಾಗದಗೇರಿ, ಗುಂಜಿನವರ ಲೈನ್, ಪಿ&ಟಿ ರಸ್ತೆ, ಮದ್ಲಿ ಓಣಿ, ಹೊಸ ಲೈನ್, ವಾರ್ಡ್ ನಂ.21, 22, 23ರ ಎಲಿಗಾರ ಪ್ಲಾಟ್, ಅಕ್ಷಯ ಮಸೂತಿ, ಕರಬಿಷ್ಟಿಯವರ ಲೈನ್, ತುಪ್ಪದವರ ಲೈನ್, ಲಕ್ಷ್ಮೇಶ್ವರ ಮನೆ ಮುಂದಿನ ಲೈನ್, ನಾಗಪ್ಪನಕಟ್ಟಿ ಲೈನ್, ಪಾಟೀಲರ ಲೈನ್, ಶಂಕರಪ್ಪ ಲೈನ್, ರಾಚೋಟೇಶ್ವರ ಗುಡಿ ಲೈನ್, ಈಟಿಯವರ ಭಾಗ-1ರಿಂದ 4ರಲ್ಲಿ ನೀರು ಸರಬರಾಜಾಗಲಿದೆ.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಅಡತಡೆಯಾದಲ್ಲಿ ಸಾರ್ವಜನಿಕರು ನಗರ ಸಭೆಯೊಂದಿಗೆ ಸಹಕರಿಸಲು ಪ್ರಕಟಣೆ ತಿಳಿಸಿದೆ.

### ಕಂದಾಯ ವಿಷಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚನೆ

## ವಿವಿಧ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮ ಕೈಗೊಳ್ಳಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕಂದಾಯ ಇಲಾಖೆಯಲ್ಲಿ ಬಾಕಿ ಇರುವ ಭೂಮಿ ಪ್ರಕರಣಗಳು, ಆರ್‌ಟಿಸಿ ಕೋರ್ಟ್ ಹಾಗೂ ವ್ಯಾಜ್ಯ ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಿ, ತಂತ್ರಾಂಶದಲ್ಲಿ ದಾಖಲಿಸಲು ಸಂಬಂಧಿತ ತಹಸೀಲ್ದಾರರುಗಳಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕಂದಾಯ ಹಾಗೂ ಇತರೆ ವಿಷಯಗಳ ಕುರಿತ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಬೆಳೆ ಸಮೀಕ್ಷೆಯನ್ನು ನಿಗದಿತ ಸಮಯದಲ್ಲಿಯೇ ಕೈಗೊಳ್ಳಬೇಕು. ಅಂದಾಗ ಮಾತ್ರ ರೈತರು ವಿಮೆ ಕ್ಲೇಮ್ ಮಾಡಲು ಅನುಕೂಲವಾಗುತ್ತದೆ. ಋತುವಿನ ಪ್ರತಿಕೂಲಗಳಿಂದ ತಡೆಗಟ್ಟುವ ಬಿತ್ತನೆ (preventive sowing) ಕುರಿತು ತಾಲೂಕು ಮಟ್ಟದ ಕೃಷಿ ಅಧಿಕಾರಿಗಳ ಸಭೆ ನಡೆಸಿ, ರೈತ ಮುಖಂಡರ ಅಭಿಪ್ರಾಯ ಸಂಗ್ರಹಿಸಬೇಕು. ನಂತರ ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಲಾಗುವುದು. ಈ ಕುರಿತು ಕೃಷಿ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದರು.

Land classification (ಭೂಮಿ ವರ್ಗೀಕರಣ) ಪ್ರಕ್ರಿಯೆಗೆ ಸಂಬಂಧಿಸಿದಂತೆ ಭೂ ದಾಖಲೆ ಇಲಾಖೆಯ ಅಧಿಕಾರಿಗಳು ಆದಷ್ಟು ಶೀಘ್ರ ಕ್ರಮ ಕೈಗೊಳ್ಳಬೇಕು. ರಜಿಸ್ಟ್ರಾರ್ ಹಂತದಲ್ಲಿ ಆರ್‌ಟಿಸಿ ಪ್ರಕರಣಗಳು ಇತ್ಯರ್ಥಗೊಳ್ಳಬೇಕು ಎಂದು ಸಭೆಯಲ್ಲಿ ತಿಳಿಸಿದರು.

ಉಪವಿಭಾಗಾಧಿಕಾರಿಗಳ ಹಾಗೂ ತಹಸೀಲ್ದಾರರ ಹಂತದಲ್ಲಿನ ವಿವಿಧ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಸೂಕ್ತ ಕ್ರಮ ವಹಿಸಲು ಸಲಹೆ ನೀಡಿದರು. ಆಯಾ ಇಲಾಖೆಯ ಯೋಜನೆಗೆ ಸಂಬಂಧಿಸಿದ ತಂತ್ರಾಂಶದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಖುದ್ದಾಗಿ ತಾವೇ ಲಾಗಿನ್ ಆಗಿ ಮರು ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕೆಂದರು.

ನೂತನ ಕಾವೇರಿ 2.0 ತಂತ್ರಾಂಶಕ್ಕೆ ಸಂಬಂಧಿಸಿದಂತೆ ಜಿಲ್ಲೆಯ 7 ಉಪನೋಂದಣಿ ಕಚೇರಿಗಳಲ್ಲಿ ಸಾರ್ವಜನಿಕರು ಇದುವರೆಗೂ ಪರಿಶೀಲನೆಗೆ ಆನ್‌ಲೈನ್‌ನಲ್ಲಿ ಉಪನೋಂದಣಾಧಿಕಾರಿಗಳಿಗೆ 5285 ದಸ್ತಾವೇಜುಗಳನ್ನು ಸಲ್ಲಿಸಿದ್ದಾರೆ. ಉಪನೋಂದಣಾಧಿಕಾರಿಗಳು ದಸ್ತಾವೇಜುಗಳನ್ನು ಪರಿಶೀಲಿಸಿ ಸಾರ್ವಜನಿಕರಿಗೆ ತಿದ್ದುಪಡಿಗಾಗಿ 1812 ದಸ್ತಾವೇಜುಗಳನ್ನು ಹಿಂತಿರುಗಿಸಿದ್ದಾರೆ. ಉಪನೋಂದಣಾಧಿಕಾರಿಗಳಿಂದ ದಸ್ತಾವೇಜುಗಳನ್ನು ಪರಿಶೀಲಿಸಿ, ಶುಲ್ಕಗಳ ಪಾವತಿಗೆ ಸಾರ್ವಜನಿಕರಿಗೆ 3670 ದಸ್ತಾವೇಜುಗಳನ್ನು ಹಿಂದಿರುಗಿಸಲಾಗಿದೆ. ದಸ್ತಾವೇಜುಗಳ ಪರಿಶೀಲನೆಯ ನಂತರ ಶುಲ್ಕ ಪಾವತಿಸಿ ಉಪನೋಂದಣಾದಿಕಾರಿಗಳ ಕಚೇರಿಯಲ್ಲಿ 4109 ದಸ್ತಾವೇಜುಗಳನ್ನು ನೊಂದಣಿ ಮಾಡಿಸಲಾಗಿದೆ ಎಂದು ಸಭೆಯಲ್ಲಿ ಆಯಾ ಇಲಾಖಾಧಿಕಾರಿಳು ಸಭೆಗೆ ಮಾಹಿತಿ ನೀಡಿದರು.

> ಭೂಮಿ ಯೋಜನೆಗೆ ಸಂಬಂಧಿಸಿದಂತೆ ಆಗಸ್ಟ್ ತಿಂಗಳಲ್ಲಿ 1150 ಅರ್ಜಿಗಳು ಸೇರಿದಂತೆ, ಒಟ್ಟೂ 1586 ಅರ್ಜಿಗಳು ಸ್ವೀಕೃತವಾಗಿವೆ. 871 ಅರ್ಜಿಗಳು ಇತ್ಯರ್ಥಗೊಂಡಿದ್ದು, 715 ಅರ್ಜಿಗಳು ಬಾಕಿ ಇವೆ. ತಹಸೀಲ್ದಾರರ ಹಂತದಲ್ಲಿ 161 ನ್ಯಾಯಾಲಯ ಪ್ರಕರಣಗಳು ಬಾಕಿ ಇವೆ. ಜಿಲ್ಲಾಧಿಕಾರಿಗಳ ಹಂತದಲ್ಲಿ ನ್ಯಾಯಾಲಯ ಪ್ರಕರಣಗಳು ಶೇ.83ರಷ್ಟು ಇತ್ಯರ್ಥಗೊಂಡಿವೆ. ಆರ್‌ಟಿಸಿ ಮಿಸ್ ಮ್ಯಾಚ್/ಎಲ್‌ಆರ್‌ಎಫ್ ಆಫ್ ಪೋಡಿ ಪ್ರಕರಣಗಳಿಗೆ ಸಂಬಂಧಿಸಿದಂತೆ 717 ಪ್ರಕರಣಗಳ ಪೈಕಿ 366 ಪ್ರಕರಣಗಳು ಇತ್ಯಥಗೊಂಡಿವೆ. 2023-24ನೇ ಸಾಲಿನ ಮೇ ಅಂತ್ಯದವರೆಗೆ ಜಿಲ್ಲೆಯ 7 ಉಪನೊಂದಣಿ ಕಚೇರಿಗಳಿಂದ 6595 ದಸ್ತಾವೇಜುಗಳಿಗೆ 9,53,04,448 ರೂ. ರಾಜಸ್ವ ಸಂಗ್ರಹಿಸಲಾಗಿದೆ.
>
> **- ವೈಶಾಲಿ ಎಂ.ಎಲ್.**
> ಜಿಲ್ಲಾಧಿಕಾರಿಗಳು, ಗದಗ.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಶಿಕಾಂತ, ಸಂಖ್ಯಾ ಸಂಗ್ರಹಣಾಧಿಕಾರಿ ಎ.ಎ ಕಂಬಾಳಿಮಠ, ಭೂ ದಾಖಲೆಗಳ ಇಲಾಖೆಯ ಅಧಿಕಾರಿಗಳು, ತಾಲೂಕಿನ ತಹಸೀಲ್ದಾರರು, ಶಿರಸ್ತೇದಾರರು, ವಿವಿಧ ಇಲಾಖೆಯ ಅಧಿಕಾರಿಗಳು, ಕಂದಾಯ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

## ಎನ್‌ಇಪಿ ರದ್ದು ನಿಲುವು ಖಂಡಿಸಿ ಪ್ರತಿಭಟನೆ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರದ್ದು ಮಾಡಲು ಹೊರಟಿರುವ ರಾಜ್ಯ ಸರ್ಕಾರದ ನಿಲುವು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಶುಕ್ರವಾರ ಶಿರಹಟ್ಟಿಯಲ್ಲಿ ಪ್ರತಿಭಟನೆ ನಡೆಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.




ಈ ಸಂದರ್ಭದಲ್ಲಿ ಮಾತನಾಡಿದ ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಅಭಿಷೇಕ ದೊಡ್ಡಮನಿ, ಸ್ವತಂತ್ರ ಭಾರತದ ಆರಂಭದಿಂದಲೂ ಮುಂದುವರೆದು ಬಂದಿರುವ ಜಿಡ್ಡುಗಟ್ಟಿದ ಶಿಕ್ಷಣ ಪದ್ಧತಿಯ ಬಗ್ಗೆ ಕೇಂದ್ರ ಸರ್ಕಾರ ಚಿಂತನ-ಮಂಥನ ನಡೆಸಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದಿರುವುದು ಸ್ವಾಗತಾರ್ಹ ಸಂಗತಿ. ಇದನ್ನು 2020-21ರಲ್ಲಿ ಮೊದಲ ಬಾರಿಗೆ ಜಾರಿಗೆ ತಂದಿರುವ ಹೆಗ್ಗಳಿಕೆ ಕರ್ನಾಟಕಕ್ಕದ್ದಾಗಿದೆ. ಏತನ್ಮಧ್ಯೆ, ಏಕಾಏಕಿ ರಾಜ್ಯ ಸರ್ಕಾರ ಪ್ರಸ್ತುತ ಹೊಸ ಶಿಕ್ಷಣ ನೀತಿಯ ಬಗ್ಗೆ ಅಪಸ್ವರ ಎತ್ತಿ ರದ್ದು ಮಾಡಲು ಮುಂದಾಗಿರುವ ಧೋರಣೆ ವಿದ್ಯಾರ್ಥಿಗಳ ಹಿತಕ್ಕೆ ಮಾರಕವಾಗಿದೆ. ಆದ್ದರಿಂದ, ವಿದ್ಯಾರ್ಥಿಗಳ ಭವಿಷ್ಯ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಪರಾಮರ್ಶೆ ನಡೆಸಿ, ರಾಜ್ಯ ಸರ್ಕಾರ ಎನ್‌ಇಪಿ ವಿರೋಧಿ ನೀತಿಯನ್ನು ಕೈಬಿಡುವಂತೆ ಪ್ರತಿಭಟನೆಯ ಮೂಲಕ ಆಗ್ರಹಿಸಿದರು.

ಪರಿಷತ್‌ನ ತಾಲೂಕು ಸಂಚಾಲಕ ದರ್ಶನ ಅಕ್ಕಿ, ಚೇತನ ಎಲಿಗಾರ, ಪ್ರಜ್ವಲ ವಾಲಿಕಾರ, ಚೇತನ ಎಲಿಗಾರ, ಪ್ರಜ್ವಲ ವಾಲಿಕಾರ, ಚಂದ್ರು ಕುಂದಗೋಳ, ಪ್ರದೀಪ ಶೆಟ್ಟರ, ಶರಣಪ್ಪ ಶಿವನಗೌಡ್ರ, ಅನಿಲ ಜೋಶಿ, ಬೀರಪ್ಪ ಗೂಳಪ್ಪನವರ, ಕಾರ್ತಿಕ ಅಕ್ಕಿ ಮುಂತಾದವರು ಉಪಸ್ಥಿತರಿದ್ದರು.

## ಆ. 28ರಂದು ದಿ. ದೇವರಾಜ್ ಅರಸು 108ನೇ ಜನ್ಮ ದಿನಾಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶೋಷಿತರ ಸಮಗ್ರ ಅಭಿವೃದ್ಧಿಯ ಸಾಮಾಜಿಕ ಕ್ರಾಂತಿಯ ಹರಿಕಾರ, ನೊಂದವರ ನಂದಾದೀಪ, ಸಾಧನೆಗಳ ಸರದಾರ, ಧೀಮಂತ ನಾಯಕ ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ದಿ.ಡಿ.ದೇವರಾಜ ಅರಸು ಅವರ 108ನೇ ಜನ್ಮದಿನಾಚರಣೆಯ ಸಮಾರಂಭವನ್ನು ನಗರದ ಮುಳಗುಂದ ರಸ್ತೆಯಲ್ಲಿನ ಕನಕ ಭವನದಲ್ಲಿ ಆಗಸ್ಟ್ 28 ರಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಗಿ ಅವರುಗಳು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶ್ರೀಮತಿ ಸಿ. ಶಿಖಾ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ತುಳಸಿ ಮದ್ದಿನೇನಿ ಆಗಮಿಸುವರು.

ಮುಂಡರಗಿ ಕೆ.ಆರ್.ಬಿ. ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಆರ್.ಎಚ್. ಜಂಗಣವಾರಿ ಉಪನ್ಯಾಸ ನೀಡುವರು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರವಿ ಲಕ್ಷ್ಮಣ ಗುಂಜೀಕರ್ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ನೇರ ಸಂದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಿಂದ ಆಗಸ್ಟ್ 31ರ ಗುರುವಾರದಂದು ಬೆಳಿಗ್ಗೆ 10 ಗಂಟೆಗೆ, ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ನರಗುಂದ (ಪತ್ರಿವನ ಮಠದ ಹತ್ತಿರ ) ಇವರ ಸಹಯೋಗದಲ್ಲಿ ನೇರ ಸಂರ್ದಶನ ಹಮ್ಮಿಕೊಳ್ಳಲಾಗಿದೆ. ಸದರಿ ನೇರ ಸಂರ್ದಶನದಲ್ಲಿ ಸನ್‌ಸೇರಾ ಇಂಜನೀಯರಿಂಗ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಕಂಪನಿ ಕಂಪನಿ ಭಾಗವಹಿಸಲಿದೆ.

ನೇರ ಸಂರ್ದಶನದಲ್ಲಿ ಪಾಲ್ಗೊಳ್ಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, 2 ರೆಸ್ಯೂಮ್(ಬಯೋಡಾಟಾ) ಪ್ರತಿಗಳು, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಝೆರಾಕ್ಸ್ ಹಾಗೂ 6 ಭಾವಚಿತ್ರಗಳೊಂದಿಗೆ ಭಾಗವಹಿಸಬಹುದು. ನೇರ ಸಂರ್ದಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 08372-220609, 6363330688, 9902679477, 6361041761 ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಬಸವಂತ ಪಿಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನೋಂದಣಿಯನ್ನು ನೇರ ಸಂದರ್ಶನದ ದಿನದಂದೆ ಮಾಡಿಸಬೇಕಾಗಿರುತ್ತದೆ. ಮತ್ತು ಅಪ್ರೆಂಟಿಸ್, ಆದವರಿಗೂ ಅವಕಾಶವಿರುತ್ತದೆ.

## ಇಸ್ರೋ ವಿಜ್ಞಾನಿಗಳ ತಂಡಕ್ಕೆ ಬಸವರಾಜ ಹೊರಟ್ಟಿಯವರಿಂದ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಚಂದ್ರನ ಮೇಲೆ ಬಾಹ್ಯಾಕಾಶ ನೌಕೆ ಇಳಿಸುವುದು ಸಣ್ಣ ವಿಷಯವಲ್ಲ. ವಿಜ್ಞಾನಿಗಳ ಸಾಧನೆ ಭಾರತದ ಪಾಲಿಗೆ ಐತಿಹಾಸಿಕವಾದದ್ದು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು.



ಶುಕ್ರವಾರ ಬೆಂಗಳೂರಿನ ಪೀಣ್ಯದಲ್ಲಿರುವ ಇಸ್ರೋ ಕಂಟ್ರೋಲ್‌ರೂಂಗೆ ಭೇಟಿನೀಡಿ ವಿಜ್ಞಾನಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ಇಂದು ಇಡೀ ಜಗತ್ತು ಭಾರತವನ್ನು ಅಚ್ಚರಿಯಿಂದ ನೋಡುವಂತೆ ನಮ್ಮ ವಿಜ್ಞಾನಿಗಳು ಸಾಧನೆ ಮಾಡಿದ್ದಾರೆ. ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋ ಚಂದ್ರಯಾನ-3ರ ಮೂಲಕ ಚಂದ್ರನ ಮೇಲೆ ವ್ಯವಸ್ಥಿತವಾಗಿ ಇಳಿದಿದೆ. ಇದೊಂದು ಐತಿಹಾಸಿಕ ಘಟನೆ. ಈ ಕಾರ್ಯಾಚರಣೆಗೆ ಪೂರ್ವದಿಂದಲೂ ಕಾರಣೀಕರ್ತರಾದ ಎಲ್ಲಾ ವಿಜ್ಞಾನಿಗಳು, ಸಿಬ್ಬಂದಿಗಳು ಅಭಿನಂದನೆಗೆ ಅರ್ಹರು ಎಂದರು.

ಈ ಸಂದರ್ಭದಲ್ಲಿ ಇಸ್ರೋ ಅಧ್ಯಕ್ಷರಾದ ಎಸ್.ಸೋಮನಾಥ, ನಿರ್ದೇಶಕರಾದ ಎಂ.ಶಂಕರನ್, ಯೋಜನಾ ನಿರ್ದೇಶಕರಾದ ಪಿ.ವೀರಮುತ್ತು ವೇಲು, ಮಿಷನ್ ನಿರ್ದೇಶಕರಾದ ಎಸ್.ಮೋಹನಕುಮಾರ, ನಿರ್ದೇಶಕರಾದ ಎಸ್.ಉನ್ನಿಕೃಷ್ಣನ್ ನಾಯರ್, ವಿ.ರಾಜನ್, ನೀಲೇಶ ಎಂ.ದೇಸಾಯಿ, ಕೆ.ಜಿ ಶಿವಾನಿ ಮುಂತಾದವರನ್ನು ಹೊರಟ್ಟಿಯವರು ಅಭಿನಂದಿಸಿ, ಸನ್ಮಾನಿಸಿದರು. ಈ ಸಂದರ್ಭದಲ್ಲಿ ನವೀನಗೌಡ, ಎಚ್.ಡಿ ಪಾಟೀಲ, ಶಂಕರೇಗೌಡ ಮುಂತಾದವರು ಉಪಸ್ಥಿತರಿದ್ದರು.

## ನಾಳೆ ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯ ರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ, ಆಗಸ್ಟ್ 27 ರಂದು ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಶ್ರೀಮತಿ ನೇತ್ರಾವತಿ ದನದಮನಿ ರವರಿಂದ "ಭಾವಗೀತೆಗಳು" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಶಿಲ್ಪಾ ಕುರಹಟ್ಟಿ ಇವರಿಂದ "ಸುಗಮ ಸಂಗೀತ" ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಮೈಲಾರಪ್ಪ ಹರಿಜನ ಇವರಿಂದ "ಜಾನಪದ ಸಂಗೀತ" ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಸರ್ಕಾರವು ಖೇಲೋ ಇಂಡಿಯಾ ಯೋಜನೆಯಡಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಇರುವ ಶ್ರೀ ಜಯಪ್ರಕಾಶ ನಾರಾಯಣ ರಾಷ್ಟ್ರೀಯ ಯುವ ಕೇಂದ್ರ, ವಿದ್ಯಾನಗರ, ಬೆಂಗಳೂರು ರಾಜ್ಯ ಉತ್ಕೃಷ್ಠತಾ ಕೇಂದ್ರ (ಈಜು, ಅಥ್ಲೆಟಿಕ್ಸ್ ಮತ್ತು ಶೂಟಿಂಗ್ ) ಎಂದು ಘೋಷಿಸಿ ಮಂಜೂರು ಮಾಡಿದ್ದು ಸದರಿ ಕೇಂದ್ರಕ್ಕೆ ಖೇಲೋ ಇಂಡಿಯಾ ನಿಯಮಗಳನುಸಾರ ಗುತ್ತಿಗೆ ಆಧಾರದ ಮೇಲೆ ಹೆಡ್ ಕೋಚ್ ಶೂಟಿಂಗ್, ಫಿಜಿಯೋಥೆರಪಿಸ್ಟ್ ಗ್ರೇಡ್ 1 ಮತ್ತು 2 ಮತ್ತು ಸ್ಪೋರ್ಟ್ಸ್ ಮೇಷಿಯರ್ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿ ಹೊಂದಿದ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಸಂಬಂಧಿಸಿದ ದಾಖಲೆಗಳನ್ನು ನೋಟರಿ ಮಾಡಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸೆಪ್ಟೆಂಬರ್ 2 ರೊಳಗಾಗಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಗಳು ಕಚೇರಿಯಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 08372-238345 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಡಿ.ದೇವರಾಜ ಅರಸು ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಎಸ್ ಪಾಟೀಲ

## ಹಿಂದುಳಿದ ವರ್ಗಗಳಿಗೆ ಅರಸುರವರಿಂದ ಆರ್ಥಿಕ ಬಲ

■ ವಿಜಯಸಾಕ್ಷಿ ಸುದ್ದಿ, ರೋಣ

ಹಿಂದುಳಿದ ವರ್ಗಗಳಿಗೆ ಡಿ.ದೇವರಾಜ ಅರಸುರವರ ಕೊಡುಗೆ ಅನನ್ಯವಾಗಿದೆ. ಅವರು ರೂಪಿಸಿರುವ ಯೋಜನೆಗಳಿಂದ ತುಳಿತಕ್ಕೊಳಗಾದ ಸಮುದಾಯಗಳಿಗೆ ನ್ಯಾಯ ಸಿಕ್ಕಿದೆ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.



ಅವರು ಶುಕ್ರವಾರ ತಾಲೂಕಾಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿದ್ದ ದಿ.ಡಿ ದೇವರಾಜ ಅರಸುರವರ 108ನೇ ಜನ್ಮದಿನಾಚರಣೆ ಕಾರ್ಯಕ್ರಮದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಶಕ್ತಿಯನ್ನು ತುಂಬಿದರು. ದೇಶದ ಮಾಜಿ ಪ್ರದಾನಿ ದಿ.ಇಂದಿರಾ ಗಾಂಧಿಜಿಯವರು ಜಾರಿಗೆ ತಂದಿದ್ದ 'ಉಳುವವನೇ ಒಡೆಯ' ಎಂಬ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಮೂಲಕ ಬಡವರಿಗೆ ಆರ್ಥಿಕ ಬಲವನ್ನು ತುಂಬಿದವರು ಅರಸುರವರು ಎಂದರು.

ಪುರಸಭೆಯ ಉಪಾಧ್ಯಕ್ಷ ಸಂಗನಗೌಡ ಪಾಟೀಲ ಮಾತನಾಡಿ, ದೇವರಾಜ ಅರಸುರವರ ಜನಪರ ಯೋಜನೆಗಳು ಐತಿಹಾಸಿಕಾವಗಿದ್ದು, ಅವರ ಸ್ಮರಣೆ ಅವಶ್ಯವಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯ ನಿರ್ಮಾಣಕ್ಕೆ ಪುರಸಭೆಯ ವತಿಯಿಂದ ಸ್ಥಳವನ್ನು ನೀಡಲಾಗಿದ್ದು, ಇನ್ನೊಂದು ವಸತಿ ನಿಲಯ ನಿರ್ಮಾಣಕ್ಕೆ ಶೀಘ್ರವೇ ಸ್ಥಳವನ್ನು ಕಲ್ಪಿಸಲಾಗುವುದು ಎಂದರು.

> ಇದೇ ಸಂಧರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಇಲಾಖೆಯಿಂದ ಸನ್ಮಾನಿಸಲಾಯಿತು. ಗುರುಭವನ ಹತ್ತಿರ ಇರುವ ವಸತಿ ನಿಲಯದಲ್ಲಿ ದಿ. ಡಿ.ದೇವರಾಜ ಅರಸುರವರ ಮೂರ್ತಿಯನ್ನು ಪುರಸಭೆಯ ಉಪಾದ್ಯಕ್ಷ ಸಂಗನಗೌಡ ಪಾಟೀಲ ಅನಾವರಣಗೊಳಿಸಿದರು.

ಪ್ರಭಾಕರ ಉಳ್ಳಾಗಡ್ಡಿ ಉಪನ್ಯಾಸ ನೀಡಿದರು. ಇಲಾಖೆಯ ಜಿಲ್ಲಾಧಿಕಾರಿ ರವಿ ಗುಂಜಿಕರ, ತಾ ಪಂ ಇಒ ಡಿ ಮೋಹನ್, ಅಕ್ಷರದಾಸೋಹಾಧಿಕಾರಿ ಬಸವರಾಜ ಅಂಗಡಿ, ತಾಲೂಕಾ ವಿಸ್ತರಣಾಧಿಕಾರಿ ಡಾ.ಬಸವರಾಜ ಬಳ್ಳಾರಿ, ಡಿ.ಎಚ್ ವಸ್ತಾದ, ಸಿ.ಬಿ ಕಲಕೇರಿ, ಶಿವಪುತ್ರಪ್ಪ ಕಮಸಗಿ, ಎಂ.ಎಸ್ ಗೋಡಿ, ಪ್ರಭಾಕರ ಚಲವಾದಿ, ಜಯದೇವಿ ಗೌಡರ, ಮಂಜುನಾಥ ಅಂಬಿಗೇರ, ಧರೆಪ್ಪ ಗುಗ್ಗರಿ, ಹನಮಂತ ಯರಗೇರಿ, ಅಂದಾನಪ್ಪ ಬಳಿಗೇರ ಸೇರಿದಂತೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕಟ್ಟಿ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆ ಆ. 28ಕ್ಕೆ



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಇಲ್ಲಿನ ಸಂತೆ ಬಜಾರದಲ್ಲಿರುವ ಶ್ರೀ ಕಟ್ಟಿ ಬಸವೇಶ್ವರ ದೇವಸ್ಥಾನದಲ್ಲಿ ಕಟ್ಟಿ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆ, ಗೋಪುರ ಉದ್ಘಾಟನೆ ಕಾರ್ಯಕ್ರಮವು ಆ.28ರ ಸೋಮವಾರ ಜರುಗಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಬೆಳಿಗ್ಗೆ 9ಕ್ಕೆ ಪ್ರಾರಂಭಗೊಳ್ಳುವ ಕಾರ್ಯಕ್ರಮದ ನೇತೃತ್ವವನ್ನು ಹಿರೇಮಠದ ಷ.ಬ್ರ. ಶ್ರೀ ಮಲ್ಲಿಕಾರ್ಜುನ ಶ್ರೀಗಳು ವಹಿಸಿಕೊಳ್ಳುತ್ತಿದ್ದು, ಹಂಪಸಾಗರ ನವಲಿ ಹಿರೇಮಠದ ಷ.ಬ್ರ. ಶ್ರೀ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಈ ಸಂದರ್ಭದಲ್ಲಿ ವೇ.ಮೂ. ರುದ್ರಮುನಿ ಸ್ವಾಮಿಗಳು ಹಿರೇಮಠ ಮತ್ತು ವೇ.ಮೂ. ವೀರಭದ್ರಯ್ಯಸ್ವಾಮಿಗಳು ಹಿರೇಮಠ ಉಪಸ್ಥಿತರಿರುವರು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಟ್ಟಿಬಸವೇಶ್ವರನ ದರ್ಶನಾಶೀರ್ವಾದ ಪಡೆದುಕೊಳ್ಳಲು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

# ಪ್ರಧಾನಿ ಮೋದಿಗೆ ಗ್ರೀಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಪ್ರದಾನ

**■ವಿಜಯಸಾಕ್ಷಿ ಸುದ್ದಿ, ಅಥೆನ್ಸ್**

ಪ್ರಧಾನಿ ಮೋದಿಯವರಿಗೆ ಗ್ರೀಸ್ ತನ್ನ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿದೆ. ಅಥೆನ್ಸ್‌ನಲ್ಲಿ ಗ್ರೀಸ್ ಅಧ್ಯಕ್ಷೆ ಕಟರೀನಾ ಸಕೆಲ್ಲರೊಪೌಲೌ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಗ್ರ್ಯಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ಆನರ್ ಪ್ರಶಸ್ತಿ ಪ್ರಧಾನ ಮಾಡಿದರು.

ಈ ಅತ್ಯುನ್ನತ ಗೌರವಕ್ಕಾಗಿ ಪ್ರಧಾನಿ ಮೋದಿ ಟ್ವೀಟ್ ಮಾಡುವ ಮೂಲಕ ಗ್ರೀಸ್‌ಗೆ ಧನ್ಯವಾದ ತಿಳಿಸಿದ್ದಾರೆ. ನಾನು ಅಧ್ಯಕ್ಷೆ ಕಟರೀನಾ ಅವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ನಾನು ಗ್ರೀಸ್ ಸರ್ಕಾರ ಮತ್ತು ಜನರಿಗೆ ಧನ್ಯವಾದಗಳು. ಇದು ಗ್ರೀಸ್ ಜನತೆಗೆ ಭಾರತದ ಬಗೆಗಿನ ಗೌರವವನ್ನು ತೋರಿಸುತ್ತದೆ ಎಂದು ಟ್ವೀಟಿಸಿದ್ದಾರೆ.

**ಪ್ರಧಾನಿ ಮೋದಿ ಹೇಳಿದ್ದೇನು?**

ಸುದೀರ್ಘ 40 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಗ್ರೀಸ್‌ಗೆ ಬಂದಿದ್ದಾರೆ. ಅದೇನೇ ಇದ್ದರೂ, ನಮ್ಮ ಸಂಬಂಧಗಳ ಆಳವು ಕಡಿಮೆಯಾಗಿಲ್ಲ ಅಥವಾ ಸಂಬಂಧಗಳ ಉಷ್ಣತೆಯಲ್ಲಿ ಯಾವುದೇ ಇಳಿಕೆಯಾಗಿಲ್ಲ. ಗ್ರೀಸ್ ಮತ್ತು ಭಾರತವು ಪ್ರಪಂಚದ 2 ಅತ್ಯಂತ ಹಳೆಯ ನಾಗರಿಕತೆಗಳು. 2 ಹಳೆಯ ಪ್ರಜಾಪ್ರಭುತ್ವ ಸಿದ್ಧಾಂತಗಳು ಮತ್ತು 2 ಹಳೆಯ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳ ನಡುವಿನ ನೈಸರ್ಗಿಕ ಹೊಂದಾಣಿಕೆಯಾಗಿದೆ. ನಮ್ಮ ಸಂಬಂಧದ ತಳಹದಿಯು ಪುರಾತನ ಮತ್ತು ಬಲವಾದದ್ದು ಎಂದು ಬರೆದುಕೊಂಡಿದ್ದಾರೆ.

ಗ್ರೀಕ್-ಭಾರತೀಯ ಸ್ನೇಹದ ಕಾರ್ಯತಂತ್ರದ ಪ್ರಚಾರದಲ್ಲಿ ಪ್ರಧಾನಿ ಮೋದಿಯವರ ನಿರ್ಣಾಯಕ ಕೊಡುಗೆಯನ್ನು ಗುರುತಿಸಿ ಗ್ರೀಸ್ ಗೌರವಿಸಿದೆ. ಈ ಭೇಟಿಯ ಸಂದರ್ಭದಲ್ಲಿ ಗ್ರೀಕ್ ರಾಜ್ಯವು ಭಾರತದ ಪ್ರಧಾನ ಮಂತ್ರಿಯನ್ನು ಗೌರವಿಸುತ್ತದೆ ಎಂದು ಗ್ರೀಸ್ ಹೇಳಿದೆ. ಅವರು ತಮ್ಮ ದೇಶದ ಜಾಗತಿಕ ವ್ಯಾಪ್ತಿಯನ್ನು ಉತ್ತೇಜಿಸಿದ ರಾಜಕಾರಣಿ ಮತ್ತು ಭಾರತದ ಆರ್ಥಿಕ ಪ್ರಗತಿ ಮತ್ತು ಸಮೃದ್ಧಿಗಾಗಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದಾರೆ.

## ಕೊನೆಗೂ ಸಾಕಾರಗೊಂಡ ಭಾರತೀಯ ಬಾಹ್ಯಾಕಾಶ ಸಂಸ್ಥೆಯ ತಪಸ್ಸು

# ಚಂದ್ರನ ಮೇಲೆ ಭಾರತದ ಹೆಜ್ಜೆ ಗುರುತು

ನಮ್ಮ ಬಾಲ್ಯಕಾಲವೇ ಒಂದು ರೀತಿಯಲ್ಲಿ ಪರ್ವಕಾಲ. ತಾಯಿಯು ತನ್ನ ಮಕ್ಕಳು ಊಟ ಮಾಡಲು, ಹಾಲು ಕುಡಿಯಲು ಹಠ ಮಾಡಿದಾಗ 'ಚಂದಮಾಮ'ನ ಕಥೆಯನ್ನು ಹೇಳುತ್ತಿದ್ದರು. ಸೂರ್ಯ ಹಗಲು ಹೊತ್ತಿನಲ್ಲಿ ತನ್ನ ದಿನಚರಿ ಮುಗಿಸಿದ ನಂತರ, ಆಕಾಶದಲ್ಲಿ ಚಂದ್ರ, ನಕ್ಷತ್ರಕಾಯಗಳ ದರ್ಶನ ನಮಗೆ ಕಾಣಸಿಗುತ್ತದೆ. ಅದರಲ್ಲೂ ಹುಣ್ಣಿಮೆಯ ದಿನ ರಾತ್ರಿಯ ವೇಳೆ ಎಲ್ಲೆಲ್ಲಿ ನೋಡಿದರೂ ಬೆಳದಿಂಗಳದೇ ಕಾರುಬಾರು! ಈ ರೀತಿಯಲ್ಲಿ ಅದರ ಸೌಂದರ್ಯವನ್ನು ಮಾತ್ರ ಸವಿಯುತ್ತಿದ್ದ ನಮಗೆ ವಿಜ್ಞಾನಿಗಳ ಸತತ ಪ್ರಯತ್ನದಿಂದಾಗಿ ನಮ್ಮ ಭಾರತ ಚಂದಿರನತ್ತ ತನ್ನ ಹೆಜ್ಜೆ ಗುರುತನ್ನು ಸಾಕ್ಷೀಕರಿಸಿದೆ. ಈ ಸುದಿನ ನಮಗಷ್ಟೇ ಅಲ್ಲದೆ, ವಿದೇಶದವರಿಗೂ ಸಹ ಅಚ್ಚರಿಯನ್ನುಂಟುಮಾಡಿದೆ.




ನಮ್ಮ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಗಮನಾರ್ಹ ಸಾಧನೆ ಮಾಡಿದೆ. ವಿಕ್ರಮ್ ಚಂದಿರನ ಅಂಗಳದ ಮೇಲೆ ಸುರಕ್ಷಿತವಾಗಿ ಇಳಿಯುವುದರ ಮೂಲಕ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ದೈತ್ಯ ಶಕ್ತಿಯಾಗಿ ಹೊರಹೊಮ್ಮಿರುವುದು ನಿಜಕ್ಕೂ ದಾಖಲೆಯೇ ಸರಿ. ಈಗ, ಇಡೀ ಜಗತ್ತು ಭಾರತದ ಕಡೆಗೆ ತಿರುಗಿ ನೋಡುತ್ತಿದೆ. ಈ ಮೂಲಕ ದಕ್ಷಿಣ ಧ್ರುವದಲ್ಲಿ ಗಗನ ನೌಕೆಯನ್ನು ಇಳಿಸಿದ ಮೊದಲ ದೇಶ ಭಾರತ ಎಂದೆನಿಸಿದೆ. ಅಲ್ಲದೆ ಚಂದ್ರನ ಮೇಲೆ ನೌಕೆಯನ್ನಿಳಿಸಿದ 4ನೇ ದೇಶ ಕೂಡ ಭಾರತವಾಗಿದೆ. ಈ ಮೊದಲು ಅಮೆರಿಕ, ರಷ್ಯಾ, ಮತ್ತು ಚೀನಾ ಮಾತ್ರ ಈ ಸಾಧನೆ ಮಾಡಿದ್ದವು. ಈ ಸಾಧನೆಯ ಮೂಲಕ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆಗೆ ಮುನ್ನುಡಿ ಬರೆದಂತಾಗಿದೆ.

ಚಂದ್ರಯಾನ-3ರ ಯಶಸ್ಸು ತಕ್ಷಣ ಸಿಕ್ಕಿಲ್ಲ. ವಿಜ್ಞಾನಿಗಳ ಸತತ ಸಂಶೋಧನೆ, ಪರಿಶ್ರಮದಿಂದಾಗಿ ಅದರ ಫಲ ಈಗ ದೊರಕಿದೆ. ಈ ನಿಟ್ಟಿನಲ್ಲಿ ಭಾರತ ತನ್ನ ಸೋಲುಗಳನ್ನೇ ಗೆಲುವಿನ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಅಭೂತಪೂರ್ವ ಯಶಸ್ಸು ಸಾಧಿಸಿದೆ. ಚಂದ್ರನ ಮೇಲೆ ಭಾರತದ ಅಧಿಪತ್ಯ ಹಾಗೂ ನವ ಭಾರತದ ಉದಯವಾಗಿದೆ ಎಂದು ಪ್ರಧಾನಿ ಮೋದಿ ಅವರು ಕೂಡ 140 ಕೋಟಿ ಜನರ ಪರವಾಗಿ ಇಸ್ರೋ ಸಂಸ್ಥೆಯನ್ನು ಅಭಿನಂದಿಸಿದ್ದಾರೆ.

ಇಸ್ರೋ ಅಧ್ಯಕ್ಷ ಎಸ್ ಸೋಮನಾಥನ್ ಒಳಗೊಂಡಂತೆ ವೀರ ಮುತ್ತುವೆಲ್, ಕೆ ಕಲ್ಪನಾ, ಮೋಹನ್ ಕುಮಾರ್, ಉನ್ನಿ ಕೃಷ್ಣನ್ ನಾಯರ್, ಎಂ ಶಂಕರನ್, ಎಂ ವನಿತಾ, ಎ ರಾಜರಾಜನ್, ವಿ ನಾರಾಯಣ, ಬಿ ಎನ್ ರಾಮಕೃಷ್ಣ, ರಿತು ಕರಿದಾಲ್ ಶ್ರೀವಾಸ್ತವ್ ಸೇರಿದಂತೆ ವಿವಿಧ ತಂಡಗಳ ಮುಖ್ಯಸ್ಥರು, ಸದಸ್ಯರ ಶ್ರಮ ಅಪಾರ. ಇಸ್ರೋದ ಮುಖ್ಯ ಕಚೇರಿ ಬೆಂಗಳೂರಿನಲ್ಲಿರುವುದು ನಮಗೆ ಹೆಮ್ಮೆ ಮೂಡಿಸುತ್ತದೆ. ಇಸ್ರೋದ ಮುಖ್ಯ ಉದ್ದೇಶ ಅಂತರಿಕ್ಷ, ತಂತ್ರಜ್ಞಾನ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತನ್ನದೇ ಆದ ಗಣನೀಯ ಸೇವೆ ಸಲ್ಲಿಸುವುದರ ಮೂಲಕ ಹೊಸ ಹೊಸ ತಂತ್ರಜ್ಞಾನಗಳಿಂದ ಅಧ್ಯಯನ ಕೈಗೊಳ್ಳುವುದೇ ಆಗಿದೆ.

ಭಾರತದ ಅಣುಶಕ್ತಿ ಇಲಾಖೆಯ ಅಡಿಯಲ್ಲಿ ಇಸ್ರೋ 1969ರಲ್ಲಿ ಉದಯವಾಯಿತು. 'ಭಾರತೀಯ ಬಾಹ್ಯಾಕಾಶ ಅಭಿಯಾನ ಪಿತಾಮಹ' ಎಂದೇ ಪ್ರಸಿದ್ಧರಾದ ಡಾ. ವಿಕ್ರಂ ಸಾರಾಬಾಯ್ ಹೆಸರಿನಲ್ಲಿಯೇ ವಿಕ್ರಂ ಸಾರಾಬಾಯಿ ಸ್ಪೇಸ್ ಸೆಂಟರ್ ಎಂದು ನಾಮಕರಣ ಕೂಡ ಮಾಡಲಾಗಿದೆ. 1972ರಲ್ಲಿ ಅಂತರಿಕ್ಷ ಇಲಾಖೆ ಸ್ಥಾಪನೆಯಾಯಿತು.



1975ರಲ್ಲಿ ಆರ್ಯಭಟ ಉಪಗ್ರಹ ಉಡಾವಣೆಯಗೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಮೊದಲೇ ಹೇಳಿದಂತೆ ನಾಲ್ಕು ವರ್ಷಗಳ ಸತತ ಪರಿಶ್ರಮ, ಅಧ್ಯಯನಗಳ ಮೂಲಕ ವಿಜ್ಞಾನಿಗಳ ತಪಸ್ಸು ಕೊನೆಗೂ ಯಶಸ್ಸು ಪಡೆದಿದೆ. ಚಂದ್ರನ ದಕ್ಷಿಣ ಧ್ರುವವನ್ನು ವಿಕ್ರಮ ಲ್ಯಾಂಡರ್ ಪ್ರಗ್ಯಾನ್ ರೋವರ್ ಸ್ಪರ್ಶಿಸುತಿದ್ದಂತೆ ಇಡೀ ದೇಶ ರೋಮಾಂಚನಗೊಂಡಿತು. ಇತರ ರಾಷ್ಟ್ರಗಳೂ ಭಾರತದೆಡೆಗೆ ಹೆಮ್ಮೆಯ ನೋಡ ಬೀರಿದವು.

ಬಾಹ್ಯಾಕಾಶ ವಿಜ್ಞಾನಿಗಳದ ವಿಕ್ರಂ ಸಾರಾಭಾಯ್, ಸತೀಶ್ ಧವನ್, ಯು.ಆರ್ ರಾವ್, ಎಪಿಜೆ ಅಬ್ದುಲ್ ಕಲಾಂ ಮುಂತಾದವರು ಈ ಕ್ಷಣದಲ್ಲಿ ನೆನಪಾಗುತ್ತಾರೆ. ಜೊತೆಗೆ ಭಾರತದ ಈ ಸಾಧನೆ ಮುಂದಿನ ಪೀಳಿಗೆಗೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಪಾಲಿಗೆ ನವ ಚೈತನ್ಯ ಉಂಟು ಮಾಡಿದೆ. ಒಟ್ಟಿನಲ್ಲಿ, ಭಾರತದ ಬಾವುಟ ಚಂದ್ರನಲ್ಲಿ ಹಾರಾಡಿತು.

ಅದು ಸೆರೆಹಿಡಿದು ನಮಗೆ ಕಳುಹಿಸಿದ ಚಿತ್ರ ಭೂಮಿಗೆ ತಲುಪಿ, ಮುಂದಿನ ಸಂಶೋಧನೆಗೆ ನೆರವಾಗುತ್ತಿದೆ.

ಮುಖ್ಯವಾಗಿ, ವಿಜ್ಞಾನಿಗಳ ಸತತ ಪರಿಶ್ರಮಕ್ಕೆ ತಕ್ಕ ಫಲ ಸಿಕ್ಕಿದ್ದು, ಮುಂದಿನ ಸಂಶೋಧನೆಗೆ ಅಧ್ಯಯನಕ್ಕೆ ನಾಂದಿಯಾಗಿದೆ. ಬಾಹ್ಯಾಕಾಶ ಲೋಕದಲ್ಲಿ ಭಾರತ ಇದೇ ರೀತಿಯ ಸಾಧನೆಗಳನ್ನು ಮುಂದೆಯೂ ಮಾಡುತ್ತಾ ಹೋಗಲಿ ಎಂಬುದೇ ಭಾರತೀಯರೆಲ್ಲರ ಆಶಯ.

**– ಕಾಳಿಹುಂಡಿ ಶಿವಕುಮಾರ್,**
ಮೈಸೂರು.

# ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನೂತನ ಎಲಿವೇಟೆಡ್ ವಾಕ್‌ವೇ ಉದ್ಘಾಟನೆ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಮತ್ತು ಸಂದರ್ಶಕರ ಅನುಕೂಲಕ್ಕಾಗಿ ಹೊಸ ಎಲಿವೇಟೆಡ್ ವಾಕ್‌ವೇಯನ್ನು ಉದ್ಘಾಟಿಸಲಾಗಿದೆ.



420 ಮೀಟರ್ ಉದ್ದದ ಎಲಿವೇಟೆಡ್ ವಾಕ್‌ವೇ ಟರ್ಮಿನಲ್ 1ರಿಂದ ಕ4 ಪಾರ್ಕಿಂಗ್ ಅನ್ನು ಸಂಪರ್ಕಿಸುತ್ತದೆ.

ವಾಕ್ ವೇ ಸರಳವಾಗಿದ್ದು ಆಧುನಿಕ ವಿನ್ಯಾಸ ಹೊಂದಿದೆ. ಎಲಿವೇಟರ್‌ಗಳು ಮತ್ತು ಎಸ್ಕಲೇಟರ್‌ಗಳು ಪ್ರಯಾಣಿಕರ ಸ್ನೇಹಿ ಸೌಕರ್ಯ ಹೊಂದಿದ್ದು ಪ್ರಯಾಣಿಕರು ಸುಲಭ ಮತ್ತು ಆರಾಮದಾಯಕವಾದ ನಡಿಗೆಯನ್ನು ಅನುಭವಿಸುವುದನ್ನು ಖಚಿತಪಡಿಸುತ್ತದೆ ಎಂದು BLR ವಿಮಾನ ನಿಲ್ದಾಣವು ಹೇಳಿಕೆಯಲ್ಲಿ ತಿಳಿಸಿದೆ. ವಿನ್ಯಾಸವು ಒಳಗೆ ಬರುವವರಿಗೆ ಆದ್ಯತೆ ನೀಡುತ್ತದೆ. ಇದು ಹಿರಿಯ ನಾಗರಿಕ ಮತ್ತು ನಿಧನವಾಗಿ ಚಲಿಸುವಂತ ವ್ಯಕ್ತಿಗಳಿಗೆ ಪ್ರಯೋಜನವಾಗಿರಲಿದೆ.

## ಹುಲಕೋಟಿ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟ

# ಮನೋಹರ ಅಮರಪ್ಪ ಇನಾಮತಿ ಪ್ರೌಢಶಾಲೆಗೆ ಸಮಗ್ರ ಪ್ರಶಸ್ತಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಹುಲಕೋಟಿ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟವು ಅಸುಂಡಿಯ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯಲ್ಲಿ ಇತ್ತೀಚೆಗೆ ನಡೆಯಿತು. ಇದರಲ್ಲಿ ಕುರ್ತಕೋಟಿ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಮನೋಹರ ಅಮರಪ್ಪ ಇನಾಮತಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ವೀರಾಗ್ರಣಿ ಪ್ರಶಸ್ತಿ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ವೈಯಕ್ತಿಕ ವಿಭಾಗ: ಮಕ್ತುಮ ದೊಡ್ಡಮನಿ-400ಮೀ, 800ಮೀ, ಗುಂಡು ಎಸೆತದಲ್ಲಿ ಪ್ರಥಮ, ಸಂತೋಷ ಪೂಜಾರ-800ಮೀ ದ್ವಿತೀಯ, ಭಲ್ಲೆ ಎಸೆ-ಪ್ರಥಮ, ವಿಜಯ ಹರ್ತಿ-1500ಮೀ ದ್ವಿತೀಯ, ನಿಯಾಜ ಕೊಪ್ಪತ-1500ಮೀ ತೃತೀಯ, ತೇಜಸ್ ಆಡ್ರಕಟ್ಟಿ-3000ಮೀ ದ್ವಿತೀಯ, ದರ್ಶನ ಈಳಗೇರ- 3000ಮೀ ತೃತೀಯ, ಶಶಾಂಕ ಕಪ್ಪರಶೆಟ್ಟಿ-5000ಮೀ ನಡಿಗೆ ದ್ವಿತೀಯ, ಅಕ್ಬರ್‌ಬಾಷಾ ನದಾಫ-ಅಡೆತಡೆ ದ್ವಿತೀಯ, ಭೀರಪ್ಪ ಪೂಜಾರ-ಚಕ್ರ ದ್ವಿತೀಯ, ಸರಪಳಿ ಗುಂಡು ಪ್ರಥಮ, ವಿನಾಯಕ ಗಡ್ಡದ-ಭಲ್ಲೆ ಎಸೆತ ತೃತೀಯ, ರಮೇಶ ಕೊರವರ-ಸರಪಳಿ ಗುಂಡು ದ್ವಿತೀಯ, ವಿಶ್ವನಾಥ ಇಸರಿ-ತ್ರಿವಿಧ ಜಿಗಿತ ದ್ವಿತೀಯ.

ಬಾಲಕರ ಗುಂಪು ಆಟದಲ್ಲಿ: ವಾಲಿಬಾಲ್ ಪ್ರಥಮ, ಥ್ರೋಬಾಲ್ ಪ್ರಥಮ, 4*100 ರಿಲೇ ದ್ವಿತೀಯ.

ಬಾಲಕಿಯರ ವೈಯಕ್ತಿಕ ವಿಭಾಗ: ನೇತ್ರಾ ಲಾಲಪಡಿ-100ಮೀ, ದ್ವಿತೀಯ, ಅನಿತಾ ಸೋಮಣ್ಣವರ-200ಮೀ ಪ್ರಥಮ, ಅಡೆತಡೆ ಪ್ರಥಮ, ಉದ್ದಜಿಗಿತ ಪ್ರಥಮ, ಫಾತಿಮಾ ದೊಡ್ಡಮನಿ-400ಮೀ ದ್ವಿತೀಯ, ಚೇತನಾ ಈರಗಾರ-1500ಮೀ ದ್ವಿತೀಯ, ರೇಣುಕಾ ಈರಗಾರ-1500ಮೀ ತೃತೀಯ, ಲಕ್ಷ್ಮೀ ಮಲ್ಲಸಮುದ್ರ-3000ಮೀ ತೃತೀಯ, ಕವಿತಾ ಬಿಸೇಬೂದಿ-5000ಮೀ ದ್ವಿತೀಯ, ಜ್ಯೋತಿ ಮಳ್ಳಿ-ಚಕ್ರ ಎಸೆತ ತೃತೀಯ, ಲಕ್ಷ್ಮೀ ಗೌಡನಾಯ್ಕರ-ಭಲ್ಲೆ ಎಸೆತ ಹಾಗೂ ತ್ರಿವಿಧ ಜಿಗಿತ ಪ್ರಥಮ, ವರ್ಷಾ ದೊಡ್ಡಮನಿ-ಸರಪಳಿ ಗುಂಡು ತೃತೀಯ, ರಕ್ಷಿತಾ ಹಿಟಬುತ್ತಿ-ಉದ್ದ ಜಿಗಿತ ತೃತೀಯ, ಪೂರ್ಣಿಮಾ ಬಿಸೇಬೂದಿ-ಎತ್ತರ ಜಿಗಿತ ಮತ್ತು ತ್ರಿವಿಧ ಜಗಿತ ದ್ವಿತೀಯ.

ಬಾಲಕಿಯರ ಗುಂಪು ಆಟದಲ್ಲಿ: ಕಬಡ್ಡಿ ದ್ವಿತೀಯ, ಖೋ-ಖೋ ದ್ವಿತೀಯ, ಥ್ರೋಬಾಲ್ ಪ್ರಥಮ. ಬಾಲಕರ ವೀರಾಗ್ರಣಿಯಾಗಿ ಮಕ್ತುಮ ದೊಡ್ಡಮನಿ, ಬಾಲಕಿಯರ ವೀರಾಗ್ರಣಿಯಾಗಿ ಅನಿತಾ ಸೋಮಣ್ಣವರ ಹೊರಹೊಮ್ಮಿದರು.

ಸಾಧನೆಗೈದ ಕ್ರೀಡಾಪಟುಗಳಿಗೆ ಹಾಗೂ ಮಾರ್ಗದರ್ಶನ ನೀಡಿದ ದೈಹಿಕ ಶಿಕ್ಷಕ ಎಂ.ಎಚ್ ಅಂಗಡಿಯವರಿಗೆ ಸಂಸ್ಥೆಯ ಅಧ್ಯಕ್ಷ ಆರ್.ಎಂ ಮೂಲಿಮನಿ, ಆಡಳಿತಾಧಿಕಾರಿ ಎಸ್. ಆರ್ ಪಾಟೀಲ, ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಯು.ವಿ ಬೆಟಗೇರಿ, ಸದಸ್ಯರಾದ ಅಪ್ಪಣ್ಣ ಇನಾಮತಿ, ಸರ್ವ ಸದಸ್ಯರು, ಮುಖ್ಯೋಪಾಧ್ಯಾಯ ಜಂಬುನಾಥ ಹರಿವಾಣ, ಶಿಕ್ಷಕ-ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## 'ಮನ-ಮನೆಗೆ ಮಾಚಿದೇವ' ವಿಶೇಷ ಕಾರ್ಯಕ್ರಮದಲ್ಲಿ ಡಾ.ಬಸವ ಮಾಚಿದೇವ ಸ್ವಾಮೀಜಿ ಅಭಿಮತ

# ಸಮಾಜದ ಏಳ್ಗೆಗಾಗಿ ಎಲ್ಲರೂ ಶ್ರಮಿಸಿ

**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಎಲ್ಲ ಸಮಾಜದವರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಬೇಕು. ಸಮಾಜದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸಮಾಜ ಸಂಘಟನೆಯ ಕೆಲಸ ಮಾಡಿ, ಸಮಾಜದ ಏಳ್ಗೆಗಾಗಿ ಶ್ರಮಿಸಬೇಕು ಎಂದು ಮಡಿವಾಳ ಗುರುಪೀಠದ ಡಾ.ಬಸವ ಮಾಚಿದೇವ ಸ್ವಾಮೀಜಿ ಹೇಳಿದರು.



ಪಟ್ಟಣದ ಜ. ತೋಂಟ-ದಾರ್ಯ ಶಾಖಾಮಠದಲ್ಲಿ ತಾಲೂಕಾ ಮಡಿವಾಳ ಸಮಾಜದ ವತಿಯಿಂದ ಶ್ರಾವಣ ಮಾಸದ ನಿಮಿತ್ತ ಬುಧವಾರ ಹಮ್ಮಿಕೊಂಡಿದ್ದ 'ಮನ-ಮನೆಗೆ ಮಾಚಿದೇವ' ವಿಶೇಷ ಕಾರ್ಯಕ್ರಮ ಹಾಗೂ ಮಡಿವಾಳ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮಾಜದ ಹಿರಿಯರಿಗೆ ಗೌರವ ಸಮರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಡಿವಾಳ ಸಮಾಜವು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಸಮಾಜವಾಗಿದ್ದು, ಸರ್ಕಾರವು ಅನ್ನಪೂರ್ಣಮ್ಮನವರ ವರದಿಯನ್ನು ಜಾರಿ ಮಾಡಿ ಸಮಾಜದ ಏಳ್ಗೆಗೆ ಅನುಕೂಲ ಮಾಡಿಕೊಡಬೇಕು ಎಂದರು. ಮಾಜಿ ಸಚಿವ ಎಸ್.ಎಸ್ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು. ಜ್ಞಾನೇಶ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಾಚಿದೇವರ ಭಾವಚಿತ್ರ ಹಾಗೂ ಡಾ.ಬಸವ ಮಾಚಿದೇವ ಸ್ವಾಮೀಜಿಯವರನ್ನು ಸಕಲ ವಾದ್ಯಮೇಳದೊಂದಿಗೆ ಮೆರವಣಿಗೆ ಮಾಡಲಾಯಿತು.

> ತನ್ನ ಅಪ್ರತಿಮ ಸಾಹಸದ ಮೂಲಕ ಕಲ್ಯಾಣ ಕ್ರಾಂತಿಯಲ್ಲಿ ಶರಣರನ್ನು ಹಾಗೂ ಅವರ ವಚನಗಳನ್ನು ರಕ್ಷಿಸಿದ ಶ್ರೇಯಸ್ಸು ಮಡಿವಾಳ ಮಾಚಿದೇವರಿಗೆ ಸಲ್ಲುತ್ತದೆ. ಬಟ್ಟೆಗಳನ್ನು ಮಡಿ ಮಾಡಿದ್ದಷ್ಟೇ ಅಲ್ಲದೇ ಕೆಟ್ಟುಹೋದ ಮನಸುಗಳನ್ನು ನೇರ ವಚನಗಳಿಂದ ಶುಚಿ ಮಾಡಿದರು.
>
> **– ಗವಿಸಿದ್ದಯ್ಯ ಹಳ್ಳಿಕೇರಿಮಠ.**
> ಜನಪದ ಕಲಾವಿದರು.

ಮಡಿವಾಳ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ ಮಡಿವಾಳರ, ತಾಲೂಕು ಘಟಕದ ಅಧ್ಯಕ್ಷ ನಿಂಗಪ್ಪ ಮಡಿವಾಳರ, ಹಿರಿಯರಾದ ದುರುಗೇಶ ಮಡಿವಾಳರ, ನಿಂಬಣ್ಣ ಮಡಿವಾಳರ, ಕೃಷ್ಣಪ್ಪ ವಿರಗಂಟಿ, ಸಾಹೇಬಣ್ಣ ಶಹಪುರ, ಮಲ್ಲಣ್ಣ ಮಡಿವಾಳರ, ಮಲ್ಲಿಕಾರ್ಜುನ ಮಡಿವಾಳರ, ಪಕ್ಕಿರಪ್ಪ ಮಡಿವಾಳರ, ರತ್ನಾ ಮಡಿವಾಳರ, ದ್ರಾಕ್ಷಾಯಿಣಿ ಮಡಿವಾಳರ, ಲಕ್ಷ್ಮಿ ಮಡಿವಾಳರ, ನಿಂಗಮ್ಮ ಮಡಿವಾಳರ, ವಿಜಯಲಕ್ಷ್ಮೀ ಮಡಿವಾಳರ, ಪದ್ಮಾ ಮಡಿವಾಳರ, ಈರಮ್ಮ ಮಡಿವಾಳರ ಮುಂತಾದವರಿದ್ದರು.

ದ್ಯಾಮಣ್ಣ ಮಡಿವಾಳರ ಸ್ವಾಗತಿಸಿದರು. ಸಂಗಮೇಶ ಮಡಿವಾಳರ ನಿರೂಪಿಸಿದರು. ಮಲ್ಲಿಕಾರ್ಜುನ ಮಡಿವಾಳರ ವಂದಿಸಿದರು.

## ದಿ.ಗಂಗಾಧರ ವಿಠೋಬಾ ವರ್ಣೇಕರ ಸ್ಮರಣಾರ್ಥ ಉಪಯುಕ್ತ ಪರಿಕರಗಳ ವಿತರಣೆ

# ವಿದ್ಯಾ ಸಂಸ್ಥೆಗೆ ನೀಡಿದ ಕಾಣಿಕೆಗೆ ಬೆಲೆ ಕಟ್ಟಲಾಗದು



> ಮನಸ್ಸು ಉದಾರವಾಗಿದ್ದಾಗ ಮಾತ್ರ ದೇಣಿಗೆ ನೀಡುವ ಮನಸ್ಸು ಬರುತ್ತದೆ. ಅಂತಹ ಗುಣವನ್ನು ಹೊಂದಿರುವ ಸುನೀಲ ವರ್ಣೇಕರ ದಂಪತಿಗಳು ಮತ್ತು ಅವರ ತಾಯಿಯವರು ಈ ಸರಕಾರಿ ಪ್ರೌಢಶಾಲೆಗೆ ಪರಿಕರಗಳನ್ನು ಕಾಣಿಕೆಯಾಗಿ ನೀಡಿದ್ದು ಸ್ತುತ್ಯವಾದ ಕಾರ್ಯ. ಪ್ರೌಢಶಾಲೆಗೆ ಸಭಾಪತಿ ಬಸವರಾಜ ಹೊರಟ್ಟಿಯವರ ಅನುದಾನದಲ್ಲಿ ರಂಗಮಂದಿರ, ಹೇಮಲತಾ ಬಸವರಾಜ ಹೊರಟ್ಟಿಯವರ ಪ್ರೇರಣೆಯಿಂದ ಗಣಿತ ಪ್ರಯೋಗಾಲಯ ಸಿದ್ಧವಾಗಿದೆ. ಈ ಅಭಿವೃದ್ಧಿಗೆ ಅವ್ವ ಸೇವಾ ಟ್ರಸ್ಟ್‌ಗೆ ಮತ್ತು ಅದಕ್ಕೆ ಕಾರಣರಾದ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಅವರ ಕುಟುಂಬ ವರ್ಗದವರ ಸಹಕಾರ ಸ್ಮರಣೀಯ.
>
> **– ಡಾ. ಬಸವರಾಜ ಧಾರವಾಡ.**
> ಅವ್ವ ಸೇವಾ ಟ್ರಸ್ಟ್ ಸಂಚಾಲಕರು.

**■ವಿಜಯಸಾಕ್ಷಿ ಸುದ್ದಿ, ಗದಗ**

ವಿದ್ಯಾ ಸಂಸ್ಥೆಗಳು ಬೆಳೆಯುವುದೇ ಸಮಾಜದ ಗಣ್ಯರು ನೀಡುವ ಧನ ರೂಪದ, ವಸ್ತು ರೂಪದ ಕಾಣಿಕೆಗಳಿಂದ. ಇದರಿಂದ ಸಮುದಾಯವೂ ಸಹ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಂತಾಗುತ್ತದೆ. ಯಾವುದೇ ವಿದ್ಯಾ ಸಂಸ್ಥೆಗೆ ನೀಡಿದ ಕಾಣಿಕೆಗೆ ಎಂದಿಗೂ ಬೆಲೆ ಕಟ್ಟಲಾಗದು ಎಂದು ಅವ್ವ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬಸವರಾಜ ಧಾರವಾಡ ಹೇಳಿದರು.

ಇಲ್ಲಿನ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಗೆ ದಿ.ಗಂಗಾಧರ ವಿಠೋಬಾ ವರ್ಣೇಕರ ಅವರ ಸ್ಮರಣಾರ್ಥ ಮಾಳ್ವಸಾ ಜ್ಯುವೆಲರಿ ಮಾರ್ಟ್‌ನ ಸುನೀಲ ಗಂಗಾಧರ ವರ್ಣೇಕರ ಪರಿವಾರದವರು ಕೊಡಮಾಡಿದ ಉಪಯುಕ್ತ ಪರಿಕರಗಳ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ ಮಾತನಾಡಿ, ಶೈಕ್ಷಣಿಕ ಪ್ರಗತಿಗೆ ಸಮುದಾಯದ ಕೊಡುಗೆ ಬಹಳ ದೊಡ್ಡದು. ದಾನಿಗಳು ಮುಂದೆ ಬಂದು ಶಿಕ್ಷಣ ಸಂಸ್ಥೆಗಳು ಬೆಳೆಯಲು ಅನುಕೂಲ ಮಾಡಿಕೊಡಬೇಕು. ಅಂತಹ ಮಹತ್ತರ ಕಾರ್ಯವನ್ನು ವರ್ಣೇಕರ ಪರಿವಾರದವರು ಇಂದು ಮಾಡಿದ್ದಾರೆ. ಆದ್ದರಿಂದ ಇಲಾಖೆಯ ಪರವಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದಾಗಿ ತಿಳಿಸಿದರು.

ವೇದಿಕೆಯ ಮೇಲೆ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ, ಜಿಲ್ಲಾ ಅಕ್ಷರ ದಾಸೋಹದ ಅಧಿಕಾರಿ ಸರಸ್ವತಿ ಕನವಳ್ಳಿ, ನಗರಸಭಾ ಸದಸ್ಯೆ ವಿದ್ಯಾ ಗಡಗಿ, ಹೇಮಲತಾ ಬ.ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಮಾರ್ಗದರ್ಶಕ ಅರುಣ ಬಿ.ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ ಮತ್ತು ಸಿಬ್ಬಂದಿಗಳು ವರ್ಣೇಕರ ಪರಿವಾರವದರು ನೀಡಿದ ಶಾಲಾ ಪರಿಕರಗಳನ್ನು ಸ್ವೀಕರಿಸಿದರು.

ಸಮಾರಂಭದಲ್ಲಿ ವರ್ಣೇಕರ ಪರಿವಾರದವರನ್ನು ಆತ್ಮೀಯವಾಗಿ ಸನ್ಮಾನಿಸಿ, ಕೃತಜ್ಞತೆಗಳನ್ನು ಅರ್ಪಿಸಲಾಯಿತು.

# ಪ್ರಗತಿಪರ ಸಾಹಿತಿಗಳಿಗೆ ಬೆದರಿಕೆ: ಸಿಸಿಬಿಗೆ ಪ್ರಕರಣಗಳ ವರ್ಗಾವಣೆ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಪ್ರಗತಿಪರ ಸಾಹಿತಿಗಳಿಗೆ ಪದೇ ಪದೇ ಬೆದರಿಕೆ ದೂರುಗಳ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ನಗರ ಕೇಂದ್ರ ಅಪರಾಧ ವಿಭಾಗಕ್ಕೆ ಪೊಲೀಸ್ ಇಲಾಖೆ ವರ್ಗಾಯಿಸಿದೆ. ಪ್ರಕರಣದ ಮೇಲ್ವಿಚಾರಣೆ ಮತ್ತು ತನಿಖೆಗೆ ಎಸಿಪಿ ಶ್ರೇಣಿಯ ಪೊಲೀಸ್ ಅಧಿಕಾರಿಯನ್ನು ನಿಯೋಜಿಸಲು ನಿರ್ಧರಿಸಲಾಗಿದೆ.

ಪ್ರಗತಿಪರ ಸಾಹಿತಿಗಳ ನಿಯೋಗ ಆ.23ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಕಳವಳ ವ್ಯಕ್ತಪಡಿಸಿತ್ತು. ಈ ಸಂಬಂಧ ಡಿಜಿಪಿ ಮತ್ತು ಐಜಿಪಿ ಅಲೋಕ್ ಮೋಹನ್ ಆದೇಶ ಹೊರಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದಲ್ಲದೆ, ಅಪರಾಧ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಮತ್ತು ಸಂಬಂಧಿಸಿದ ಡಿಸಿಪಿ ಅವರು ಪ್ರತಿದಿನವೂ ಪ್ರಕರಣಗಳನ್ನು ಪರಿಶೀಲಿಸುವಂತೆ ನಿರ್ದೇಶನಗಳನ್ನು ನೀಡಲಾಗಿದೆ. ಹಲವು ಬರಹಗಾರರಿಗೆ ಬೆದರಿಕೆ ಪತ್ರಗಳು ಬಂದಿದ್ದು, ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದೆ.

ಒಂದು ವರ್ಷದಿಂದ ಸಾಹಿತಿಗಳಿಗೆ ದೂರವಾಣಿ ಕರೆ ಮತ್ತು ಪತ್ರಗಳ ಮೂಲಕ ಬೆದರಿಕೆಗಳು ಬರುತ್ತಿವೆ ಎಂದು ಖ್ಯಾತ ಲೇಖಕ ಕೆ.ಮರುಳಸಿದ್ದಪ್ಪ ತಿಳಿಸಿದ್ದಾರೆ. ಈ ಬೆಳವಣಿಗೆ ಆತಂಕ ಮೂಡಿಸಿದ್ದು, ಲೇಖಕರು ಭಯಭೀತರಾಗಿ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಖ್ಯಾತ ಪ್ರಗತಿಪರ ಸಾಹಿತಿಗಳಾದ ಕುಂ.ವೀರಭದ್ರಪ್ಪ, ವಸುಂಧರಾ ಭೂಪತಿ ಮತ್ತು ಬಂಜಗೆರೆ ಜಯಪ್ರಕಾಶ್ ಅವರಿಗೆ ಹೆಚ್ಚಿನ ಸಂಖ್ಯೆಯ ಬೆದರಿಕೆಗಳು ಬಂದಿವೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದಿದ್ದರೆ, ಗೌರಿ ಲಂಕೇಶ್ ಮತ್ತು ಎಂ.ಎಂ. ಕಲಬುರ್ಗಿ ಅವರ ಗತಿಯನ್ನೇ ಎದುರಿಸಬೇಕಾಗುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಗರ್ಭಿಣಿಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಕಳಸಾಪೂರ ಗ್ರಾಮದಲ್ಲಿ ಶುಕ್ರವಾರ ಬಸವಕೇಂದ್ರದ ವತಿಯಿಂದ ಗ್ರಾಮ ಪಂಚಾಯಿತಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಹಯೋಗದಲ್ಲಿ ಗರ್ಭಿಣಿಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಜರುಗಿತು.

ಕಾರ್ಯಕ್ರಮದಲ್ಲಿ ಗರ್ಭಿಣಿ ಮಹಿಳೆಯರ ರಕ್ತದೊತ್ತಡ, ಮಧುಮೇಹ, ಥೈರಾಯ್ಡ್ ಸೇರಿದಂತೆ ವಿವಿಧ ರೋಗಗಳ ತಪಾಸಣೆ ನಡೆಸಲಾಯಿತು. ಮುಖ್ಯ ಆರೋಗ್ಯಾಧಿಕಾರಿ ಸ್ಯಾಮುಲ್ ಕರಡಿಗುಡ್ಡ ಮಾತನಾಡಿ, ಗರ್ಭಿಣಿಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನವಹಿಸಿ, ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಕಳಸಾಪೂರ ಬಸವಕೇಂದ್ರದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಖಂಡಮ್ಮನವರ ಮಾತನಾಡಿದರು.

ಡಾ. ಎಸ್‌ವ್ಹಿಟಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಆರೋಗ್ಯ ತಪಾಸಣೆ ನೆರವೇರಿಸಿದರು. ಕಾಲೇಜಿನ ಮ್ಯಾನೇಜರ್ ರಮೇಶ ಆರ್.ಕಟ್ಟೆಣ್ಣವರ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಶಿಬಿರದಲ್ಲಿ ಆಶಾ ಕಾರ್ಯಕರ್ತರಾದ ರತ್ನಾ ಕೆ.ಲಮಾಣಿ, ಲಲಿತಾ ತಳವಾರ ಉಪಸ್ಥಿತರಿದ್ದರು.

ಗ್ರಾಮದ ಮಹಿಳೆಯರಾದ ಪಾರ್ವತಿ ಹೂಗಾರ, ಶಮಶಾದ ರಾ.ದೊಡ್ಡಮನಿ, ಫಾತಿಮಾ ದೊಡ್ಡಮನಿ, ಸಂಗೀತಾ ಲಮಾಣಿ, ಜ್ಯೋತಿ ಕಮ್ಮಾರ ಸೇರಿದಂತೆ ಅನೇಕ ಮಹಿಳೆಯರು ಭಾಗವಹಿಸಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

# ಭಾರತವು ಸಾಂಪ್ರದಾಯಿಕ ಹಬ್ಬಗಳ ತವರೂರು



■ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಸಂಪ್ರದಾಯದ ಹಬ್ಬಗಳಲ್ಲೊಂದಾದ ರಕ್ಷಾ ಬಂಧನದ ನಿಮಿತ್ತ ವಿಡಿಎಸ್ ಕಾಲೇಜಿನ ಬಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ರಾಖಿ ತಯಾರಿಕಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾದಾನ ಸಮಿತಿಯ ಕಾರ್ಯದರ್ಶಿ ಶ್ರೀನಿವಾಸ ಹುಯಿಲಗೋಳ ಮಾತನಾಡಿ, ಅಣ್ಣ- ತಂಗಿಯರ ಪವಿತ್ರ ಸಂಬಂಧವನ್ನು ಗಟ್ಟಿಗೊಳಿಸುವಲ್ಲಿ ಈ ರಾಖಿ ಹಬ್ಬವು ಮಹತ್ವದ್ದಾಗಿದೆ. ಮೌಲ್ಯಗಳು ಕಣ್ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಈ ಹಬ್ಬದ ಆಚರಣೆ ಅರ್ಥಪೂರ್ಣವಾಗಿದೆ ಎಂದರು.

ಪ್ರಶಿಕ್ಷಣಾರ್ಥಿಗಳು ತಯಾರಿಸಿದ ವಿವಿಧ ನಮೂನೆಯ ರಾಖಿ ಪ್ರದರ್ಶನವನ್ನು ವೀಕ್ಷಿಸಿ ಪ್ರಥಮ ಸ್ಥಾನ ಪಡೆದವರಿಗೆ ಶುಭಕೋರಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಪ್ರಾಚಾರ್ಯ ಡಾ. ಗಂಗೂಬಾಯಿ ಪವಾರ ಪ್ರಶಿಕ್ಷಣಾರ್ಥಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾಲೇಜಿನ ಸಮಸ್ತ ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಪಾಲ್ಗೊಂಡಿದ್ದರು. ಅಶ್ವಿನಿ ಪ್ರಾರ್ಥನಾ ಗೀತೆ ಹಾಡಿದರು.

ಉಪನ್ಯಾಸಕ ವಿ.ಪಿ ಪಾಟೀಲ ಸ್ವಾಗತಿಸಿದರು. ಸೌಮ್ಯ ಜೋಶಿ ನಿರೂಪಿಸಿದರು. ಎನ್.ಜಿ ಚನ್ನಪ್ಪಗೌಡರ ವಂದಿಸಿದರು.

# ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಉಡಿ ತುಂಬುವ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಮುಜರಾಯಿ ಇಲಾಖೆಯ ಧಾರ್ಮಿಕ ದತ್ತಿ ಇಲಾಖೆಯ ಆದೇಶದಂತೆ ವರಮಹಾಲಕ್ಷ್ಮೀ ಹಬ್ಬದ ದಿನ ಮಹಿಳೆಯರಿಗೆ ಅರಿಶಿಣ-ಕುಂಕುಮ ವಿತರಿಸುವ ಕಾರ್ಯಕ್ರಮವನ್ನು ಕಂದಾಯ ನಿರೀಕ್ಷಕ ಬಸವರಾಜ ಎಂ.ಕಾತರಾಳ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಎಲ್ಲಿ ಮಹಿಳೆಯರನ್ನು ಗೌರವದ ಭಾವನೆಯಿಂದ ಕಾಣುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಭಾವನೆ ಮಹಿಳೆಯರ ಹಿರಿಮೆಯನ್ನು ಸಾರುತ್ತದೆ. ಪ್ರತಿಯೊಂದು ಪೂಜನೀಯ ವಸ್ತುವಿಗೂ ಮಹಿಳೆಯ ಹೆಸರಿನಿಂದ ಕರೆಯುವ ನಾಡಿನಲ್ಲಿ, ಪವಿತ್ರ ಶ್ರಾವಣ ಮಾಸದ ವರಮಹಾಲಕ್ಷ್ಮೀ ಹಬ್ಬದ ದಿನ ದೇವಾಲಯಗಳಲ್ಲಿ ಉಡಿ ತುಂಬಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದರು.

ಸಂಜೆ ದೇವಸ್ಥಾನದ ಪ್ರಾಂಗಣದಲ್ಲಿ ನೂರಾರು ಮುತ್ತೈದೆಯರು ಉಡಿ ತುಂಬಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಿ ದೇವಸ್ಥಾನ ಕಮಿಟಿ, ಅರ್ಚಕರಿಂದ ಗೌರವಿಸಲ್ಪಟ್ಟರು. ಈ ವೇಳೆ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಸಮಿತಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಸುರೇಶ ರಾಚನಾಯ್ಕರ, ಎಸ್.ಎಫ್ ಆದಿ, ಸೋಮಣ್ಣ ಬಂಡಿವಾಡ, ಬಸವರಾಜ ಮೆಣಸಿನಕಾಯಿ, ವಿರೂಪಾಕ್ಷಪ್ಪ ಆದಿ, ಪರಪ್ಪ ಉಮಚಗಿ, ಮಲ್ಲೇಶಪ್ಪ ಕಣವಿ, ಜಯಪ್ರಕಾಶ ಹೊಟ್ಟಿ, ಸ್ನೇಹಾ ಹೊಟ್ಟಿ, ಸುಮಾ ಚೋಟಗಲ, ಸಂಕಲ್ಪ ಹಾಲೆವಾಡಿಮಠ, ಶಿದ್ರಾಮಗೌಡ ಬಳ್ಳೊಳ್ಳಿ, ಅರ್ಚಕರಾದ ರಾಘವೇಂದ್ರ ಪೂಜಾರ, ಸೋಮನಾಥ ಪೂಜಾರ, ಕೀರ್ತಿ ಕಾತರಾಳ ಸೇರಿ ಹಲವರಿದ್ದರು.

## ಜಂಟಿ ಗ್ರಂಥಾಲಯ ಸಮಿತಿ ಸಭೆಯ ಪೂರ್ವದಲ್ಲಿ ಸಭಾಪತಿಗಳಿಂದ ನುಡಿನಮನ

# ಗ್ರಂಥಾಲಯ ಕ್ಷೇತ್ರಕ್ಕೆ ಎಸ್.ಆರ್ ರಂಗನಾಥನ್ ಸೇವೆ ಸ್ಮರಣೀಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಗ್ರಂಥಾಲಯದ ಪಿತಾಮಹ ಎಂದೇ ಖ್ಯಾತಿ ಹೊಂದಿದ ಗಣಿತ ತಜ್ಞ, ಬರಹಗಾರ, ಚಿಂತಕ ಎಸ್.ಆರ್ ರಂಗನಾಥನ್ ಅವರು ಗ್ರಂಥಾಲಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ನಾಡು ಎಂದಿಗೂ ಮರೆಯದು ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಬೆಂಗಳೂರಿನ ವಿಧಾನಸೌಧದಲ್ಲಿ ವಿಧಾನ ಪರಿಷತ್ ಹಾಗೂ ವಿಧಾನಸಭೆಯ ಜಂಟಿ ಗ್ರಂಥಾಲಯ ಸಮಿತಿ ಸಭೆಯ ಪೂರ್ವದಲ್ಲಿ ಎಸ್.ಆರ್ ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಓರ್ವ ಗಣಿತ ತಜ್ಞರಾಗಿ, ಚಿಂತಕರಾಗಿ, ಬರಹಗಾರರಾಗಿ, ಪ್ರಕಾಶಕರಾಗಿ ಎಲ್ಲ ಕ್ಷೇತ್ರಗಳಲ್ಲೂ ಇವರು ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಗ್ರಂಥಾಲಯದ ಪಿತಾಮಹ ಎಂದೇ ಕರುನಾಡಿನಲ್ಲಿ ಖ್ಯಾತಿ ಹೊಂದಿದ



> ಎಸ್.ಆರ್ ರಂಗನಾಥನ್ ಅವರು ಗ್ರಂಥಾಲಯ ಕ್ಷೇತ್ರಕ್ಕೆ ಅಪಾರ ಕೊಡುಗೆಗಳನ್ನು ನೀಡಿದ್ದಾರೆ. ಗ್ರಂಥಾಲಯ ವಿಭಾಗದಲ್ಲಿ ಹಲವಾರು ಮಹತ್ವದ ಬದಲಾವಣೆಗಳನ್ನು ತರುವ ಮೂಲಕ ಓದುಗರನ್ನ ಹೆಚ್ಚು ಆಕರ್ಷಿಸುವಲ್ಲಿ ಇವರ ಶ್ರಮ ದೊಡ್ಡದು. ಅಲ್ಲದೆ ಗ್ರಂಥಾಲಯದಲ್ಲಿ ಆಧುನಿಕತೆಯನ್ನು ಬಳಸಿಕೊಂಡು ಅತ್ಯಂತ ಸರಳವಾಗಿ ಓದುಗರ ಕೈಗೆ ಪುಸ್ತಕ ಸಿಗುವ ಹಾಗೆ ಮಾಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.
>
> **– ಬಸವರಾಜ ಹೊರಟ್ಟಿ.**
> ಸಭಾಪತಿಗಳು.

ಇಂತಹ ಮಹನೀಯರನ್ನು ಗೌರವಿಸುವುದು ನಮಗೆಲ್ಲರಿಗೂ ಹೆಮ್ಮೆಯ ಹಾಗೂ ಅಭಿಮಾನದ ಸಂಗತಿ ಎಂದರು.

ತರುವಾಯ, ಜಂಟಿ ಗ್ರಂಥಾಲಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ವಿವಿಧ ಪ್ರಮುಖ ವಿಷಯಗಳ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಸದಸ್ಯರೊಂದಿಗೆ ಚರ್ಚಿಸಿದರು. ವಿಧಾನಸೌಧದಲ್ಲಿರುವ ಗ್ರಂಥಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಮೂಲ್ಯವಾದ ಪುಸ್ತಕಗಳನ್ನು, ಗ್ರಂಥಗಳನ್ನು ಅತ್ಯಂತ ಸುರಕ್ಷಿತವಾಗಿ ಕಾಪಾಡಿಕೊಳ್ಳುವುದರ ಜೊತೆಗೆ ಗ್ರಂಥಾಲಯವನ್ನು ಶುಚಿಯಾಗಿಟ್ಟುಕೊಳ್ಳಬೇಕೆಂದು ಸಿಬ್ಬಂದಿಗೆ ಸೂಚಿಸಿದರು. ಸಾಧ್ಯವಾದಷ್ಟು ಗಣಕೀಕರಣ ಮೂಲಕ ಪುಸ್ತಕಗಳನ್ನು ತಕ್ಷಣ ಹುಡುಕಿಕೊಡುವ ಹೊಸ ಹೊಸ ಆವಿಷ್ಕಾರದತ್ತ ಸಿಬ್ಬಂದಿಗಳು ಗಮನಹರಿಸಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಯು.ಬಿ ವೆಂಕಟೇಶ್, ಸಿ.ಎನ್ ಮಂಜೇಗೌಡ ಅಡಗೂರು, ಎಚ್.ವಿಶ್ವನಾಥ್, ಮಾಜಿ ವಿ ಪ ಸದಸ್ಯ ಶ್ರೀಕಂಠೇಗೌಡ ಸೇರಿದಂತೆ ವಿಧಾನಸಭೆಯ ಹಾಗೂ ವಿಧಾನ ಪರಿಷತ್ತಿನ ಅಧಿಕಾರಿಗಳು, ಗ್ರಂಥಾಲಯ ಸಂಬಂಧಿತ ಗಣ್ಯಮಾನ್ಯರು, ವಿಷಯ ತಜ್ಞರು ಉಪಸ್ಥಿತರಿದ್ದರು.

# ಭೀಕರ ದುರಂತ; ಒಂಬತ್ತು ಜನರ ಸಾವು

■ವಿಜಯಸಾಕ್ಷಿ ಸುದ್ದಿ, ಕೇರಳ

ಕೇರಳದ ವಯನಾಡಿನಲ್ಲಿ ಜೀಪು ನಿಯಂತ್ರಣ ತಪ್ಪಿ, ಹಳ್ಳಕ್ಕೆ ಬಿದ್ದ ಪರಿಣಾಮ 9 ಮಂದಿ ಸಾವನ್ನಪ್ಪಿರುವ ದಾರುಣ ಘಟನೆ ಶುಕ್ರವಾರ ಸಂಜೆ ನಡೆದಿದೆ.

ತಲಪುಳ ಕಣೋಟ್ ಗುಡ್ಡದಲ್ಲಿ ಈ ದುರ್ಘಟನೆ ನಡೆದಿದ್ದು, ಜೀಪು ನಿಯಂತ್ರಣ ತಪ್ಪಿ, ಹಳ್ಳಕ್ಕೆ ಬಿದ್ದು ಈ ಘಟನೆ ನಡೆದಿದೆ.

ತೋಟದಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದ 12 ಜನರು ಕೆಲಸ ಮುಗಿಸಿ ಹಿಂದಿರುಗುತ್ತಿದ್ದ ವೇಳೆ ಘಟನೆ ನಡೆದಿದ್ದು, ಒಂಭತ್ತು ಮಂದಿ ಮೃತಪಟ್ಟಿದ್ದಾರೆ. ಬದುಕಿ ಉಳಿದವರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.



ಇಂದು ಮಧ್ಯಾಹ್ನ 3.45ಕ್ಕೆ ಈ ಘಟನೆ ನಡೆದಿದ್ದು, ಖಾಸಗಿ ಟೀ ತೋಟಗಳಿಗೆ ಕೆಲಸಕ್ಕೆ ಹೋಗುತ್ತಿದ್ದ ಕಾರ್ಮಿಕರನ್ನು ಹೊತ್ತೊಯ್ಯುತ್ತಿದ್ದ ಜೀಪ್ ಇದಾಗಿತ್ತು. ತಲಪುಳ ಕಡೆಯಿಂದ ವಣ್ಮಣಿ ಕಡೆಯಿಂದ ಬರುತ್ತಿದ್ದ ಜೀಪ್ ಕಣೋತ್ ಪರ್ವತ ಹತ್ತುವಾಗ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ.

ಗಾಯಾಳುಗಳನ್ನು ಸ್ಥಳೀಯರು ಕೂಡಲೇ ವಯನಾಡ್ ವೈದ್ಯಕೀಯ ಕಾಲೇಜಿಗೆ ದಾಖಲಿಸಲಾಗಿದೆ ಎಂದು ಮಲಯಾಳಂ ಮಾಧ್ಯಮಗಳು ವರದಿ ಮಾಡಿದೆ.

# ಪ್ರಧಾನಿ ಮೋದಿ ರೋಡ್ ಶೋ ಇಲ್ಲ; ಶೋಭಾ ಕರಂದ್ಲಾಜೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ನಾಳೆ ಪ್ರಧಾನಿ ನರೇಂದ್ರ ಮೋದಿಯವರು ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಲು ಬೆಂಗಳೂರಿಗೆ ಬರುತ್ತಿದ್ದಾರೆ. ಆದರೆ ಯಾವುದೇ ರೀತಿಯ ರೋಡ್ ಶೋ ಆಯೋಜಿಸಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ಪಷ್ಟನೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಯಾವುದೇ ರೀತಿ ರೋಡ್ ಶೋ ಆಯೋಜಿಸಿಲ್ಲ. ಗ್ರೀಸ್ ಪ್ರವಾಸವನ್ನು ಮುಗಿಸಿ ನಾಳೆ ಬೆಳಗ್ಗೆ ನೇರವಾಗಿ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ



ಪ್ರಧಾನಿ ಆಗಮಿಸಲಿದ್ದಾರೆ. ವಿಮಾನ ನಿಲ್ದಾಣದಲ್ಲಿ ಸ್ವಾಗತವಷ್ಟೇ ಇರಲಿದೆ ಎಂದು ತಿಳಿಸಿದರು.

'ಇಸ್ರೋಗೆ ಭೇಟಿ ನೀಡಿ, ವಿಜ್ಞಾನಿಗಳನ್ನು ಅಭಿನಂದಿಸಲಿದ್ದಾರೆ. ಆ ಬಳಿಕ ಇಸ್ರೋ ಹಮ್ಮಿಕೊಂಡಿರುವ ಆದಿತ್ಯ ಯೋಜನೆಯ ಬಗ್ಗೆಯೂ ಮಾತುಕತೆ ನಡೆಸಲಿದ್ದಾರೆ. ಇದನ್ನು ಹೊರತುಪಡಿಸಿ ಯಾವುದೇ ರೋಡ್ ಶೋ ಆಯೋಜಿಸಿಲ್ಲ. ಬೆಂಗಳೂರಿನ ಕಾರ್ಯಕರ್ತರು ಪ್ರಧಾನಿಗೆ ಸ್ವಾಗತ ಕೋರಲಿದ್ದಾರೆ' ಎಂದು ಶೋಭಾ ಕರಂದ್ಲಾಜೆ ಸ್ಪಷ್ಟನೆ ನೀಡಿದ್ದಾರೆ.

ಪ್ರಧಾನಿ ಬೆಂಗಳೂರು ಭೇಟಿಯ ವೇಳೆ ಬಿಜೆಪಿ ವತಿಯಿಂದ ರೋಡ್ ಶೋ ಆಯೋಜನೆಗೆ ಸಿದ್ಧತೆ ನಡೆಸಲಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ಸುದ್ದಿ ಹರಿದಾಡಿದ ಬೆನ್ನಲ್ಲೇ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ಪಷ್ಟನೆ ನೀಡಿದ್ದಾರೆ.

# ಕೊಡಗಿನಲ್ಲಿ ಕಾಡಾನೆ ದಾಳಿ: ರೈತ ಸಾವು

■ವಿಜಯಸಾಕ್ಷಿ ಸುದ್ದಿ, ಮಡಿಕೇರಿ

ಉತ್ತರ ಕೊಡಗಿನಲ್ಲಿ ಕಾಡಾನೆ ದಾಳಿ ಹೆಚ್ಚುತ್ತಿದ್ದು, ಶುಕ್ರವಾರ ಆನೆ ದಾಳಿಗೆ ರೈತರೊಬ್ಬರು ಬಲಿಯಾಗಿದ್ದಾರೆ. ಕಳೆದ ಎರಡು ವಾರಗಳಲ್ಲಿ ಜಿಲ್ಲೆಯಲ್ಲಿ ವರದಿಯಾದ ಮೂರನೇ ಆನೆ ದಾಳಿ ಇದಾಗಿದೆ.

ಸೋಮವಾರಪೇಟೆ ತಾಲೂಕಿನ ಬಾಣಾವರ ಅರಣ್ಯ ವ್ಯಾಪ್ತಿಯ ಆದಿನಾದೂರು ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಮೃತ ರೈತನನ್ನು ಬಣಗೇರಿ ಈರಪ್ಪ(63) ಎಂದು ಗುರುತಿಸಲಾಗಿದೆ. ಕಾಣೆಯಾದ ಹಸು ಹುಡುಕಿಕೊಂಡು ಹೋಗಿದ್ದ ರೈತನ ಮೇಲೆ ಆನೆ ದಾಳಿ ಮಾಡಿದೆ. ದಾಳಿಗೊಳಗಾದ ಈರಪ್ಪ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಆನೆ ಓಡಿಸುವ ಪ್ರಯತ್ನ ಮಾಡಿದ್ದಾರೆ.

ಘಟನೆ ಕುರಿತು ಸೋಮವಾರಪೇಟೆ ಪೊಲೀಸರು ಹಾಗೂ ಸೋಮವಾರಪೇಟೆ ವಿಭಾಗದ ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿದೆ. ಘಟನಾ ಸ್ಥಳಕ್ಕೆ ಎಸಿಎಫ್ ಗೋಪಾಲ್ ಮತ್ತಿತರರು ಭೇಟಿ ನೀಡಿದ್ದರು.

# ಶ್ರೀ ಗುರುಮೃತ್ಯುಂಜಯ ಅಪ್ಪನವರ ಸ್ಮರಣೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಮಣಕವಾಡದ ಮಹಿಮಾ ಪುರುಷ ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿಗಳ ಸ್ಮರಣೋತ್ಸವದ 119ನೇ ಕಾರ್ಯಕ್ರಮ ಶನಿವಾರ ಮುಂಜಾನೆ 10.30ಕ್ಕೆ ನಗರದ ಲಖಾಣಿ ಆಸ್ಪತ್ರೆ ಎದುರುಗಿನ ಶ್ರೀ ಗುರುಮೃತ್ಯುಂಜಯ ಗುರುಕುಲ ಆಶ್ರಮದ ಸಭಾಭವನದಲ್ಲಿ ಜರುಗಲಿದೆ.

ಹಿರಿಯ ಸಾಹಿತಿಗಳಾದ ಐ.ಕೆ. ಕಮ್ಮಾರ ಸಮಾರಂಭದ ಅಧ್ಯಕ್ಷತೆ ವಹಿಸುವರು. ಕೆಇಬಿ ನಿವೃತ್ತ ಅಧಿಕಾರಿ ಡಿ.ಜಿ ಪಾಟೀಲ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಅದೇ ದಿನ ಶ್ರೀ ಗುರುಮೃತ್ಯುಂಜಯ ಸೇವಾ ಸಮಿತಿಯ ಕಾರ್ಯಕಾರಿಣಿ ಸಭೆ ಜರುಗಲಿದೆ. ನಾಗಾವಿಯ ಹಿರಿಯರಾದ ಕೆ.ಬಿ ಮರಡ್ಡಿ ಗುರುಗಳು, ಮೃತ್ಯುಂಜಯ ಹಟ್ಟಿ, ಹಿರೇಹಂದಿಗೋಳದ ಶರಣಪ್ಪಗೌಡ್ರ ಬಳ್ಳೊಳ್ಳಿ, ಜಕ್ಕನಗೌಡ



ಜಕ್ಕನಗೌಡ್ರ, ಎಚ್.ಎನ್ ಕುರಿ, ರಾಯಪ್ಪ ಜಿ.ನಾಗನೂರ, ಶಿವಣ್ಣ ಒಡೆಯರ, ರಾಜೇಂದ್ರಸಾ ಕಲಬುರ್ಗಿ, ಗುರುಲಿಂಗಪ್ಪಣ್ಣ ಬಿದರಿ ಮುಂತಾದವರು ಪಾಲ್ಗೊಳ್ಳುವರು.

ಈ ಪುಣ್ಯಕಾರ್ಯದಲ್ಲಿ ಪಾಲ್ಗೊಂಡು ಶ್ರೀ ಗುರುಮೃತ್ಯುಂಜಯ ಅಪ್ಪನ ಕೃಪೆಗೆ ಪಾತ್ರರಾಗಲು ಆಶ್ರಮದ ವಿದ್ಯಾರ್ಥಿಗಳಾದ ಆಲಮ್, ಅಕ್ರಮ್, ಅಸ್ಲಂ, ಬಸು ಹಿರೇಮಠ, ಸ್ನೇಹ ಬಡಿಗೇರ, ದೀಪಾ, ಆದಿತ್ಯ ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.



ಗದುಗಿನ ಕಾಮತ್ ಕಿರಾಣಿ ಮಾಲಕರಾದ ಅರವಿಂದ ಕಾಮತ್ ಅವರು ಕುಟುಂಬ ಸಮೇತರಾಗಿ ಯುರೋಪ್ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅವರನ್ನು ವಾಕಿಂಗ್ ಗ್ರೂಪ್‌ನ ಮಿತ್ರರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಚನ್ನವೀರಪ್ಪ ಹುಣಸಿಕಟ್ಟಿ, ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಮಧುಸೂದನ ಪುಣೇಕರ, ತಾತನಗೌಡ ಪಾಟೀಲ, ಪ್ರಕಾಶ ಉಗಲಾಟದ, ಮಹಾಂತೇಶಗೌಡ ಪಾಟೀಲ, ರಾಜು ಮಲ್ಲಾಡದ, ಅಶೋಕ ಪಾಟೀಲ, ಸಂಜಯ ಬಾಗಮಾರ, ಉಮೇಶ ನಾಲ್ವಾಡ, ವಿಜಯಕುಮಾರ ಶಿವಪ್ಪಗೌಡ್ರ, ಬಾಪುಗೌಡ ಸಂಕನಗೌಡಡ, ದಲಾಲ ಅಸೋಸಿಯೇಶನ್ ಅಧ್ಯಕ್ಷ ಮುರುಗೇಶ ಬಡ್ನಿ, ಶರಣು ಗದಗ, ಸುರೇಶ ರಡ್ಡೇರ, ಸಿದ್ದಣ್ಣ ಹಲವಾಗಲಿ, ರೇಣುಕಾಪ್ರಸಾದ ಹಿರೇಮಠ, ವಿರೂಪಾಕ್ಷಯ್ಯ ಹಿರೇಮಠ, ಬಾಬುಗೌಡ ಮಲ್ಲನಗೌಡ್ರ, ಮೌಲಾಲಿ ಮುಲ್ಲಾನವರ ಇದ್ದರು.



ಶ್ರಾವಣ ಮಾಸದ ಶುಕ್ಲ ಪಕ್ಷ 2ನೇ ಶುಕ್ರವಾರದಂದು ಗದಗ ನಗರದ ಕೆ.ಸಿ ರಾಣಿ ರಸ್ತೆಯಲ್ಲಿರುವ ಶ್ರೀಮತಿ ಗಿರಿಜಾದೇವಿ ಹಿರೇಮಠರವರ ನಿವಾಸದಲ್ಲಿ ವರಲಕ್ಷ್ಮೀ ಪೂಜೆಯನ್ನು ಶ್ರದ್ಧಾ-ಭಕ್ತಿಯಿಂದ ನೆರವೇರಿಸಿ, ಮುತ್ತೈದೆಯವರಿಗೆ ಕಂಕಣ ಕಟ್ಟಿ, ಸಿಂಧೂರ ಮುಡಿಸಿ, ಉಡಿ ತುಂಬಿ ಆಶೀರ್ವಾದ ಪಡೆದುಕೊಂಡರು. ಸುಮಂಗಲೆಯರು ಮಂಗಳಾರತಿ ಹಾಡಿ ದೇವಿಯ ಕೃಪೆಗೆ ಪಾತ್ರರಾದರು. ಗಿರಜಾದೇವಿ ಹಿರೇಮಠ, ಸಹನಾ ಪ್ರಸಾದ ಹಿರೇಮಠ, ಸ್ನೇಹಾ ವಿಜಯಕುಮಾರ ಹಿರೇಮಠ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾದರು.

## ಕದಳಿಶ್ರೀ ವೇದಿಕೆಯಿಂದ 'ಅಮೃತಭೋಜನ ಜ್ಞಾನಸಿಂಚನ' ಕಾರ್ಯಕ್ರಮದಲ್ಲಿ ಜ್ಯೋತಿ ಭರಮಗೌಡರ

# ಶರಣರ ನಿಲುವಿನಿಂದ ಸಾಮಾಜಿಕ ಪ್ರಗತಿ

■ವಿಜಯಸಾಕ್ಷಿ ಸುದ್ದಿ, ಗದಗ

ಶರಣರ ಚಿಂತನೆ, ನಿಲುವುಗಳು ಸಾಮಾಜಿಕ ದೃಷ್ಟಿಕೋನವನ್ನು ಬದಲಿಸುವಂತಿವೆ. ಮಹಾತ್ಮರು, ಶರಣರು ವಚನಗಳ ಮೂಲಕ ಜನಸಾಮಾನ್ಯರಿಗೆ ಬದುಕಿನ ನೈಜ ಅರ್ಥವನ್ನು ತಿಳಿಸಿದರು ಎಂದು ಚಿಂತಕಿ ಜ್ಯೋತಿ ಭರಮಗೌಡರ ಹೇಳಿದರು.

ಅವರು ಶುಕ್ರವಾರ ಬೆಟಗೇರಿಯ ಸರಕಾರಿ ಹಿರಿಯ ಪ್ರಾಥಮಿಕ ಹೆಣ್ಣುಮಕ್ಕಳ ಶಾಲೆ ನಂ.1ರಲ್ಲಿ ಗದಗ ಜಿಲ್ಲಾ ಶರಣೆ ಅಕ್ಕಮಹಾದೇವಿ ಕದಳಿಶ್ರೀ ವೇದಿಕೆಯಿಂದ ಜರುಗಿದ 'ಅಮೃತಭೋಜನ ಜ್ಞಾನಸಿಂಚನ' ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸಿಹಿ ಭೋಜನ ಉಣಬಡಿಸಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ



ವಿದ್ಯಾಭ್ಯಾಸದೊಂದಿಗೆ ವಚನಗಳನ್ನು, ನುಡಿಮುತ್ತುಗಳನ್ನು, ಮಹಾತ್ಮರ ಚರಿತ್ರೆಗಳನ್ನು ತಿಳಿದುಕೊಳ್ಳಬೇಕೆಂದರು.

ಮಕ್ಕಳಿಗೆ ದಾನಿಗಳು ಕೊಡಮಾಡಿದ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಚಿಂತಕಿ ವಿಜಯಲಕ್ಷ್ಮೀ ಮಾನ್ವಿ, ಮಕ್ಕಳು ಓದು-ಬರಹದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಸೃಜನಶೀಲತೆ ಬೆಳೆದುಬರುತ್ತದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹೇಮಾ ಪೊಂಗಾಲಿಯಾ, ಶ್ರಾವಣ ಮಾಸದ ಅಮೃತ ಭೋಜನ ಜ್ಞಾನಸಿಂಚನ ಔಚಿತ್ಯಪೂರ್ಣ ಕಾರ್ಯಕ್ರಮವಾಗಿದ್ದು, ಪ್ರತಿವರ್ಷ ನಡೆಯುವ ಈ ಕಾರ್ಯಕ್ರಮಕ್ಕೆ ದಾನಿಗಳೇ ಆಧಾರ ಎಂದರು.


> ಸಾಗರಿಕಾ ಅಕ್ಕಿ ಮಾತನಾಡಿ, ನಾವಿಂದು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ. ಶಿಕ್ಷಣದಿಂದ ವ್ಯಕ್ತಿತ್ವ ವಿಕಸನವಾಗುವದಲ್ಲದೆ, ಭವ್ಯ ಭವಿಷ್ಯವನ್ನು ರೂಪಿಸಿ ಮನುಷ್ಯನನ್ನು ಉನ್ನತ್ತ ಮಟ್ಟಕ್ಕೇರಿಸುವಲ್ಲಿ ಶಿಕ್ಷಣ ಪ್ರಭಾವಶಾಲಿ ಮಾಧ್ಯಮವಾಗಬಲ್ಲದು ಎಂದರು. ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯೆ ಗೀತಾ ಜವಳಿ ಮಾತನಾಡಿ, ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಕದಳಿಶ್ರೀ ವೇದಿಕೆ ಹಮ್ಮಿಕೊಳ್ಳುವ ಈ ಕಾರ್ಯಕ್ರಮ ಶರಣರ ಜ್ಞಾನದಾಸೋಹ, ಅನ್ನದಾಸೋಹ ಪರಂಪರೆಯ ಸಂಕೇತವಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿ ಕವಿತಾ ದಂಡಿನ ಮಾತನಾಡಿ, ದಾನಿಗಳ ಸಹಕಾರದೊಂದಿಗೆ ನಡೆಯುವ ಈ ಕಾರ್ಯಕ್ರಮದಿಂದ ಶಾಲೆಗಳಿಗೆ ಸಮುದಾಯದ ಸಹಭಾಗಿತ್ವ, ಸ್ಪಂದನೆ ದೊರೆತಂತಾಗಿದೆ ಎಂದರು. ಪೂರ್ಣಿಮಾ ತಾಳಿಕೋಟಿ, ರಕ್ಷಿತಾ ಕಬಾಡಿ ಪ್ರಾರ್ಥಿಸಿದರು. ಎಂ.ಎಚ್ ಇಚ್ಚಂಗಿ ಸ್ವಾಗತಿಸಿದರು. ಹೇಮಾ ಮುಳಗುಂದ ನಿರೂಪಿಸಿದರು. ನಿಕಿತಾ ಕೋಟೆಕಲ್ ವಂದಿಸಿದರು.

ಶಮಶಾದ್ ಶಹಪೂರ, ಪ್ರತಾಪ ತಾಳಿಕೋಟಿ, ಅರುಂಧತಿ ಕುಂಬಾರ, ಫಕ್ಕೀರೇಶ ಚಿಕ್ಕಮಠ, ರಾಜೇಶ ಕೊತಬಾಳ, ಸಂಜನಾ ತಟ್ಟಿ ಮುಂತಾದವರು ಪಾಲ್ಗೊಂಡಿದ್ದರು.

## ನಿಧನ ವಾರ್ತೆ

### ಸರಸ್ವತಿ ಶಂಕ್ರಪ್ಪ ಮಟ್ಟಿ



ಮುಳಗುಂದ : ಪಟ್ಟಣದ ಸೌಳಭಾವಿ ಓಣಿಯ ನಿವಾಸಿ ಸರಸ್ವತಿ ಶಂಕ್ರಪ್ಪ ಮಟ್ಟಿ (95) ಶುಕ್ರವಾರ ನಿಧನರಾಗಿದ್ದಾರೆ. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka